Funding: Tattva Heritage Foundation,Kolkata. Digitization: eGangotri.

B.16

ಆತನನ್ನು ಅರಮನೆಗೆ ಬರಮಾಡಿಕೊಂಡು ಸತ್ಕರಿಸಿ, ಸಂತಾನದ ವಿಷಯದಲ್ಲಿ ಆತನ ಆಶೀರ್ವಾದವನ್ನು ವರವನ್ನಾಗಿಯೇ ಪಡೆದನು. ಕೆಲ ಕಾಲದಮೇಲೆ ಸುನಂದೆಗೆ ಒಂಬತ್ತು ಮಂದಿ ಪುತ್ರರೂ, ಮುರೆಗೆ ಒಬ್ಬ ಪುತ್ರನೂ ಜನಿಸಿದರು. ಸುನಂದೆಯ ಮಕ್ಕಳು ನವನಂದರೆಂದು ಹೆಸರಾದರು. ಮುರೆಯ ಮಗನಿಗೆ ಮೌರ್ಯನೆಂದೇ ಹೆಸರು.

ರಾಜಪುತ್ರರೆಲ್ಲರೂ ಕೆಲಕಾಲದಮೇಲೆ ರಾಜ್ಯನಿರ್ವಹಣಯೋಗ್ಯವಾದ ವಯಸ್ಸಿಗೆ ಬಂದರು. ಇಷ್ಟು ಹೊತ್ತಿಗೆ ಸರ್ವಾರ್ಥಸಿದ್ಧಿ ಮುಪ್ಪೇರಿದನು. ಮುಂದೆ ಆಡಳಿತವನ್ನು ನಿರ್ವಹಿಸಲಾಗದ ತನ್ನ ಸ್ಥಿತಿಯನ್ನು ತಾನೇ ಕಂಡುಕೊಂಡು ಅವನು ಹಿರಿಮಕ್ಕಳಾದ ನವನಂದರಿಗೆ ರಾಜ್ಯವನ್ನೊಪ್ಪಿಸಿ ಕಿರಿಯವನಾದ ಮೌರ್ಯನನ್ನು ಸೇನಾಪತಿಯನ್ನಾಗಿ ನೇಮಿಸಿದನು. ಇಷ್ಟಾದ ಬಳಿಕ ವೈರಾಗ್ಯವನ್ನು ತಾಳಿ ವಾನಪ್ರಸ್ಥವನ್ನು ಕೈಕೊಂಡು ಅವನು ತಪೋವನವನ್ನು ಸೇರಿದನು.

ನವನಂದರು ಬಹಳ ದುಷ್ಟರು. ಗುಣಾಢ್ಯನೂ, ವೀರಾಧಿವೀರನೂ ಆದ ಮೌರ್ಯನು ಸೇನಾಪತಿಯಾಗಿರುವುದು ಅವರಿಗೆ ಸಹಿಸಲಿಲ್ಲ. ಅವನು ಪ್ರಜೆಗಳ ಅನುರಾಗವನ್ನು ಸಂಪೂರ್ಣವಾಗಿ ಸಂಪಾದಿಸಿದ್ದುದು ಅವರಿಗೆ ಅಸೂಯೆಯನ್ನು ತಂದಿತು. ಎಂದಾದರೊಂದು ದಿನ ತಮ್ಮನ್ನು ಪದಚ್ಯುತರನ್ನಾಗಿಸಿ, ಮೌರ್ಯನು ಸಿಂಹಾಸನವನ್ನು ಆಕ್ರಮಿಸಿಕೊಂಡಾನೆಂದು ಅವರೆಲ್ಲರೂ ಅಂತರಂಗದಲ್ಲಿಯೆ ಬೆದರಿದರು. ಹೀಗೆ ಕೆಲ ದಿನಗಳು ಕಳೆದಮೇಲೆ ಆ ಧೂರ್ತರ ಅಸೂಯೆ ಹಗೆಯಾಗಿ ಪರಿಣಮಿಸಿ ಮೌರ್ಯನನ್ನು ಕೊನೆಗಾಣಿಸುವ ಹಂತಕ್ಕೆ ಮುಟ್ಟಿತು. ಎಲ್ಲರೂ ರಹಸ್ಯವಾಗಿ ಸಂಧಾನಗಳನ್ನು ಬೆಳಸಿ ಮೌರ್ಯನನ್ನೂ ಅವನ ಸಂತತಿಯನ್ನೂ ಉಪಾಯವಾಗಿ ಹಿಡಿದು ನೆಲಮಾಳಿಗೆಯಲ್ಲಿ ಕೂಡಿಬಿಟ್ಟರು.

ಸಾಕಾದಷ್ಟು ಆಹಾರವಿಲ್ಲದಿದ್ದುದರಿಂದ ದಿನ ಕಳೆದಂತೆಲ್ಲ ಮೌರ್ಯನೂ, ಅವನ ಮಕ್ಕಳಲ್ಲಿ ಒಬ್ಬರಾದ ಮೇಲೊಬ್ಬರೂ ಕಾಲಗತಿಯನ್ನು ಅನುಸರಿಸತೊಡಗಿದರು. ಅವರಲ್ಲಿ ಚಂದ್ರಗುಪ್ತನು ಮಾತ್ರ ದೈವಯೋಗದಿಂದ ಹೇಗೆಹೇಗೆಯೋ ಉಸಿರನ್ನುಳುಹಿಕೊಂಡು ಸೇಡಿನ ಸ್ವರೂಪವೇ ತಾನಾಗಿ ಕಾಲವನ್ನು ನೂಕುತ್ತಿದ್ದನು.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಕೆಲವು ದಿನಗಳು ಕಳೆದವು. ನವನಂದರಿಗೆ ಮೌರ್ಯರ ನೆನಪೇ ಮರೆತುಹೋಗುವಷ್ಟು ಸಮಾಧಾನ ತಲೆದೋರಿ ಎಲ್ಲರೂ ನಿರಾತಂಕ ವಾಗಿದ್ದರು. ಆದರೆ ಅವರು ಮೌರ್ಯರ ಸಹಾಯವನ್ನೇ ಬಯಸುವ ಪ್ರಸಂಗವೊಂದು ಅನಿರೀಕ್ಷಿತವಾಗಿ ನಡೆಯಿತು. ಸಿಂಹಳದ ಅರಸು ಒಳಗೆ ಸಿಂಹ ಪುತ್ಥಳಿಯಡಗಿದ ಪಂಜರವನ್ನು ಪಾಟಲೀಪುತ್ರಕ್ಕೆ ಕಳುಹಿಸಿ "ಬಾಗಿಲು ತೆಗೆಯದೆಯೆ ಸಿಂಹವನ್ನು ಹೊರದೂಡುವ ಚತುರರಾದರೂ ಇರುವರೆ?" ಎಂಬ ಒಗಟಿಯೊಡನೆ ಆಳುಗಳನ್ನಟ್ಟಿದ್ದನು. ಸರ್ವಾರ್ಥಸಿದ್ಧಿ ತಪೋವನವನ್ನು ಸೇರಿದಮೇಲೆ ಮೌರ್ಯನನ್ನು ಬಂಧಿಸಿರುವ ಸುದ್ದಿ ಯನ್ನು ತಿಳಿದ ಬಳಿಕ ಸಿಂಹಳದರಸು ಮಗಧರಾಜ್ಯದ ಬಲಾಬಲಗಳ ಪರೀಕ್ಷೆಗಾಗಿಯೆ ಈ ಯುಕ್ತಿಯನ್ನು ಹೂಡಿದ್ದನು. ಇದನ್ನು ಕಂಡು ಕೊಳ್ಳಬಲ್ಲ ವಕ್ರನಾಸನೇ ಮೊದಲಾದ ವೃದ್ಧಮಂತ್ರಿಗಳಾರೂ ಅಗ್ಗೆ ಅಲ್ಲಿರಲಿಲ್ಲ. ನಂದರಿಗೆ ದಿಕ್ಕುತೋರದಾಯಿತು. ಮೌರ್ಯನೂ ಅವನ ಮಕ್ಕಳೂ ಇಂಥ ಒಗಟೆಗಳನ್ನು ಬಿಡಿಸುವುದರಲ್ಲಿ ಬಹಳ ಜಾಣರೆಂಬುದು ಅವರಿಗೆ ತಿಳಿದಿದ್ದುದರಿಂದ ನೆಲಮಾಳಿಗೆಯನ್ನು ತೆರೆದು, ಅವರು ಮೌರ್ಯ ನನ್ನು ಆಹ್ವಾನಿಸಿದರು. ಅವರ ಆಹ್ವಾನಕ್ಕೆ ಉತ್ತರವಾಗಿ ಚಂದ್ರಗುಪ್ತನು ಅವರಿಗೆ ಕಾಣಿಸಿಕೊಂಡನು. ಅವನಿಂದಲೆ ಉಳಿದವರೆಲ್ಲರೂ ಮಡಿದು ಹೋದ ಸುದ್ದಿಯೂ ಅವರಿಗೆ ತಿಳಿಯಿತು. ಆದರೂ ಯಾವ ಅಳುಕೂ ಇಲ್ಲದೆ ಅವರು ಚಂದ್ರಗುಪ್ತನನ್ನೇ ಆ ಸನ್ನಿವೇಶದಲ್ಲಿ ತಮಗೆ ನೆರವು ನೀಡಬೇಕೆಂದು ಕೋರಿದರು.

ಚಂದ್ರಗುಪ್ತನಿಗೆ ಬಂಧನದಿಂದ ಬಿಡುಗಡೆಯಾಗುವ ಸಂತೋಷ ಒಂದು ಕಡೆ ತಂದೆ; ಅಣ್ಣತಮ್ಮಂದಿರು ಮಡಿದುಹೋದ ದುಃಖ ಇನ್ನೊಂದುಕಡೆ ಬಾಧಿಸುತ್ತಿದ್ದರೂ ಮುಂದೆ ಎಂದಾದರೊಂದು ದಿನ ದುರುಳನಂದರ ಮೇಲೆ ಸೇಡುತೀರಿಸಿಕೊಳ್ಳಬಹುದೆಂಬ ಆಕಾಂಕ್ಷೆಯಿಂದ ಅವರ ಬಿನ್ನಹಕ್ಕೆ ಒಪ್ಪಿಕೊಂಡನು. ಸಭಾಂಗಣಕ್ಕೆ ಬಂದು ಸಿಂಹಳದ ಒಳಸಂಚಿನ ರೂಪವೇ ಆದ ಆ ಪಂಜರವನ್ನು ನೋಡಿ, ಅದರ ಮೇಲೆ ಬರೆದಿದ್ದ ಸಮಸ್ಯೆಯನ್ನು ಓದಿ, ಅವನು ಅದರೊಳಗಿನ ಸಿಂಹವನ್ನು ಅಂತೆಯೆ ಹೊರದೂಡುವುದು ಸುಲಭಸಾಧ್ಯವೆಂದೇ ಬಗೆದನು. ಒಡನೆಯೆ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಕಾದ ಕಬ್ಬಿಣದ ಕೋಲನ್ನು ತರಿಸಿ ಅದರಿಂದ ಒಳಗಿದ್ದ ಆ ಮೇಣದ ಸಿಂಹವನ್ನು ಕರಗಿಸಿದನು. ಸಿಂಹಳರಾಜನ ಕಡೆಯವರಿಗೆ ಆಶ್ಚರ್ಯವೂ ಅದರೊಡನೆಯೆ ಭೀತಿಯೂ ಏಕಕಾಲದಲ್ಲಿ ಸಮನಿಸಿದವು. ಅವರು ಮಗಧರಾಜ್ಯ ಧೀಮಂತರ ಬೀಡೆಂದು ಹೊಗಳಿ ಅಂತರಂಗದಲ್ಲಿ ಹುದುಗಿದ್ದ ಭೀತಿಯನ್ನು ಹೊರಗಾಣಿಸಿಕೊಳ್ಳದೆ ಅಲ್ಲಿಂದ ಹೊರಟುಹೋದರು.

ಹೀಗೆ ಮೌರ್ಯನ ಮಗನಾದ ಚಂದ್ರಗುಪ್ತನಿಗೆ ಸಂದ ಗೌರವವನ್ನು ನೋಡಿ ನವನಂದರು ಆಗಲೂ ಸಹಿಸದೆ ಹೋದರು. ತಮ್ಮ ಮಾನವನ್ನೂ ರಾಜ್ಯದ ಗೌರವವನ್ನೂ ಉಳಿಸಿದ ಅವನನ್ನು ಮತ್ತೆ ಸೆರೆಗೆ ಸೇರಿಸುವುದು ಅವರಿಗೆ ಅಷ್ಟಾಗಿ ಸರಿತೋರಲಿಲ್ಲ. ಅವನನ್ನು ಅರಮನೆಯಲ್ಲಿಯೆ ಇರಿಸಿಕೊಂಡು ಯಾವ ಉತ್ತಮಪದವಿಯನ್ನೂ ಅವನಿಗೆ ಕೊಡಲು ಅವರ ಮನಸ್ಸು ಒಪ್ಪಲಿಲ್ಲ. ಬಹಳವಾಗಿ ಯೋಚಿಸಿ ಕಡೆಗೆ ಅವರು, ಅರಮನೆಯ ಅನ್ನಸತ್ರಕ್ಕೆ ಅವನನ್ನು ಪಾರುಪತ್ಯಗಾರನನ್ನಾಗಿ ನೇಮಿಸಿ ಅದೇ ಅಪರಿಮಿತವಾದ ಔದಾರ್ಯವೆನ್ನುವ ಮಟ್ಟಿಗೆ ನಟನೆ ಮಾಡಿದರು. ಚಂದ್ರಗುಪ್ತನಿಗೆ ಈ ಉದ್ಯೋಗ ಉಚಿತವಲ್ಲವೆಂಬುದು ತೋರದಿರಲಿಲ್ಲ. ಆದರೂ ಅವನು ತನ್ನ ಕಾರ್ಯಸಾಧನೆಗಾಗಿ ಅದನ್ನೊಪ್ಪಿಕೊಂಡು ನಂದರ ಮನಸ್ಸಿನಂತೆಯೆ ನಡೆಯುತ್ತ ಸಮಯನಿರೀಕ್ಷಣೆಯಲ್ಲಿದ್ದನು.

ಸತ್ರಾಧಿಕಾರಿಯಾಗಿ ಕಾಲಹರಣಮಾಡುತ್ತಿದ್ದಂತೆ ಚಂದ್ರಗುಪ್ತನ ಭಾಗ್ಯಪಂಕ್ತಿ ಸುಮುಖವಾಯಿತು. ಬಹುಕಾಲದಿಂದ ಅವನ ಮನಸ್ಸಿನಲ್ಲಿ ಹೊಗೆಯಾಡುತ್ತಿದ್ದ ಹಗೆಯನ್ನು ಸಾಧಿಸಿಕೊಳ್ಳಲು ಅವನಿಗೆ ಒಳ್ಳೆಯ ಅವಕಾಶ ತಾನಾಗಿಯೇ ಪ್ರಾಪ್ತವಾಯಿತು. ಅವನು ಒಂದು ದಿನ ಕುಸುಮಪುರದ ಹೊರಬಯಲಿನಲ್ಲಿ ಬರುತ್ತಿದ್ದಾಗ ಎಂದೂ ಕಾಣದ ಆಶ್ಚರ್ಯವೊಂದನ್ನು ಕಂಡನು. ಒಬ್ಬಾನೊಬ್ಬ ಬ್ರಾಹ್ಮಣ ಕಾಲಿಗೆ ತಗುಲಿ ತೊಂದರೆಪಡಿಸಿತೆಂಬ ಚಟದಿಂದ ದರ್ಭೆಯ ಕೊಳೆಯೊಂದನ್ನು ಬುಡಮುಟ್ಟಕಿತ್ತು ಅದನ್ನು ಸುಟ್ಟು ಬೂದಿ ಊದುತ್ತಿದ್ದನು. ಆಗಿನ ಅವನ ರೋಷ, ಛಲಗಳನ್ನು ಕಂಡು ಚಂದ್ರಗುಪ್ತನು ಅವನಾರೋ ಅಸಾಧಾರಣ ಪುರುಷನೆಂದೇ ಭಾವಿಸಿದನು. ಆತನಿಂದ ನಂದ ನಿರ್ಮೂಲನ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಕಾರ್ಯಕ್ಕೆ ನೆರವು ದೊರೆಕೀತೆಂದು ಅವನಿಗೆನ್ನಿಸಿತು. ಹಗೆಯನ್ನು ಹೇಗೆಯೋ ನಾಶಮಾಡಬೇಕೆಂದೂ ಶತ್ರುಶೇಷವನ್ನುಳಿಸಬಾರದೆಂದೂ ಅವನು ಆ ಬ್ರಾಹ್ಮಣನ ಕೃತ್ಯದಿಂದ ಪಾಠಕಲಿತನು. ಒಡನೆಯೆ ಆತನನ್ನು ಕಂಡು ನಮಸ್ಕರಿಸಿ ತನ್ನ ಪೂರ್ವೋತ್ತರಗಳೆಲ್ಲವನ್ನೂ ಹೇಳಿಕೊಂಡನು. ಆ ಬ್ರಾಹ್ಮಣನೂ ಚಂದ್ರಗುಪ್ತನ ವಿನಯ ವಿಧೇಯತೆಗಳಿಗೆ ಮೆಚ್ಚಿ ಅವನನ್ನು ಶಿಷ್ಯನನ್ನಾಗಿ ಪರಿಗ್ರಹಿಸಿದನು. ಚಂದ್ರಗುಪ್ತನು ವೃಷಲನಾದರೂ ದುರುಳರಾದ ನಂದರ ನಿರ್ಮೂಲನದಲ್ಲಿಯೂ ರಾಜ್ಯ ಸಂಪಾದನೆಯಲ್ಲಿಯೂ ನೆರವು ನೀಡುವುದಾಗಿ ಅವನನ್ನು ಆತನು ಅನುಗ್ರಹಿಸಿದನು.

ಈ ಬ್ರಾಹ್ಮಣನ ಹೆಸರು ವಿಷ್ಣುಗುಪ್ತ. ಇವನಿಗೆ ಚಾಣಕ್ಯನೆಂದೂ ಕೌಟಲ್ಯನೆಂದೂ ಉಪನಾಮ. ಅರ್ಥಶಾಸ್ತ್ರದಲ್ಲಿ ಇವನು ಮಹಾ ನಿಪುಣ. ಆ ಶಾಸ್ತ್ರವನ್ನು ಕುರಿತ ಒಂದು ಗ್ರಂಥವನ್ನು ಇವನು ಆಗಲೇ ಬರೆದಿದ್ದನು. ನಾಲ್ಕು ವೇದಗಳಲ್ಲಿಯೂ, ವಿಶೇಷವಾಗಿ ಜ್ಯೋತಿಶ್ಶಾಸ್ತ್ರದಲ್ಲಿಯೂ, ಇವನಿಗೆ ಪೂರ್ಣಪಾಂಡಿತ್ಯವಿದ್ದಿತು. ಇವನು ಪಾಟಲೀಪುತ್ರದ ಸಮೀಪದಲ್ಲಿಯೆ ಸಣ್ಣದೊಂದು ಆಶ್ರಮವನ್ನು ಮಾಡಿಕೊಂಡು ಶಿಷ್ಯರಿಗೆ ವೇದಾಭ್ಯಾಸವನ್ನು ಮಾಡಿಸುತ್ತಿದ್ದನು. ಉದ್ದಾಮಪಂಡಿತನಾದರೂ, ಬೇಕಾದಷ್ಟು ಉಪಪತ್ತಿಯಿದ್ದರೂ ಇವನು ಕೇವಲ ಆಡಂಬರವಿಲ್ಲದ ಸಾಮಾನ್ಯಜೀವನವನ್ನು ಮಾಡುತ್ತ ನಿಷ್ಠಾವಂತನಾಗಿದ್ದನು. ಇವನಷ್ಟು ಪ್ರತಿಭಾಸಂಪನ್ನರು ಆಗಿನ ಕಾಲದಲ್ಲಿ ಮತ್ತಾರೂ ಇರಲಿಲ್ಲ.

ಒಂದು ದಿನ ಕುಸುಮಪುರದಲ್ಲಿ ಹಬ್ಬ. ಅರಮನೆಯಲ್ಲಿ ನಂದರು ಈ ಹಬ್ಬವನ್ನು ಬಹುವೈಭವದಿಂದ ನಡಸುತ್ತಿದ್ದಾರೆ. ಸತ್ರದಲ್ಲಿ ರಾಜ ಪರಿವಾರದವರಿಗೆಲ್ಲ ಭೋಜನ ಏರ್ಪಾಟಾಗಿದೆ. ವಿಷ್ಣುಗುಪ್ತನು ಭೋಜನ ಸಮಯಕ್ಕೆ ಸರಿಯಾಗಿ ಸತ್ರಕ್ಕೆ ಬಂದು ಅಲ್ಲಿ ಅಗ್ರಪೀಠವನ್ನಲಂಕರಿಸಿ ಕುಳಿತನು. ನವನಂದರು ಅಲ್ಲಿಗೆ ಬಂದು ಅಗ್ರಪೀಠವನ್ನು ಮಂಡಿಸಿದ್ದ ಅವನನ್ನು ಕಂಡು, ಶ್ರೇಷ್ಠಾಸನದಲ್ಲಿ ಇವನೇಕೆ ಕುಳಿತನೆಂದು ಮುನಿದು ಅವನನ್ನು ಎಳೆದು ದೂಡಿದರು. ಹಬ್ಬಕ್ಕೆ ಬಂದಿದ್ದ ವೃದ್ಧನಾದ ಸರ್ವಾರ್ಥಸಿದ್ಧಿಯೂ ರಾಕ್ಷಸನೇ ಮೊದಲಾದ ಅಮಾತ್ಯರೂ ಹಾಗೆ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಮಾಡಿದುದು ಅಪರಾಧವೆಂದು ಎಷ್ಟೇ ಹೇಳಿದರೂ ಮೂರ್ಖ ನಂದರು ವಿಷ್ಣುಗುಪ್ತನನ್ನು ಸಮಾಧಾನ ಪಡಿಸಲಿಲ್ಲ. ತಮ್ಮ ಕಾರ್ಯಕ್ಕೂ ಪಶ್ಚಾತ್ತಾಪಪಡಲಿಲ್ಲ. ಮಹಾಕೋಪಿಯಾದ ವಿಷ್ಣುಗುಪ್ತನು ನಂದರೆಸಗಿದ ಈ ಅಪಮಾನವನ್ನು ಸಹಿಸಿಯಾನೆ? ಅವನಿಗೆ ರೋಷ ಮಿತಿಮೀರಿ ಬಂದಿತ್ತು. ನಂದರ ಮೇಲೆ ಸೇಡು ತಾನೇತಾನಾಗಿ, ಆ ಭೋಜನಶಾಲೆಯ ಮಧ್ಯದಲ್ಲಿಯೇ ಮುಡಿಯನ್ನು ಬಿರಿಹೊಯ್ದು "ನಂದಾಧಮರನ್ನು ಮೂಲೋತ್ಪಾಟನ ಮಾಡುವವರೆಗೂ ಮುಡಿಗಟ್ಟುವುದಿಲ್ಲ" ಎಂದು ಶಪಥಮಾಡಿ ಹೊರಟುಹೋದನು. ಇದಾದ ಬಳಿಕ ಚಂದ್ರಗುಪ್ತನು ತನಗೂ ಅವನಿಗೂ ಇರುವ ಗುರುಶಿಷ್ಯಸಂಬಂಧ ನಂದರಿಗೆ ತಿಳಿದರೆ ತನ್ನ ಕಾರ್ಯಕ್ಕೆ ಭಂಗ ಬಂದೀತೆಂದು ಶಂಕಿಸಿ ಉಪಾಯವಾಗಿಯೇ ರಾಜಧಾನಿಯನ್ನು ತೊರೆದುಹೋಗಿ ಅವನನ್ನೇ ಆಶ್ರಯಿಸಿದನು.

ಕೌಟಿಲ್ಯನು ನಂದಕುಲನಿರ್ಮೂಲನಕ್ಕಾಗಿ ಕುಟಿಲೋಪಾಯಗಳನ್ನು ಹೂಡಲು ಮೊದಲುಮಾಡಿದನು. ರಾಜನೀತಿಶಾಸ್ತ್ರದಲ್ಲಿ ಅದ್ವಿತೀಯಪಾಂಡಿತ್ಯವುಳ್ಳ ಅವನು ಮೊಟ್ಟಮೊದಲು ರಾಜಧಾನಿಯಾದ ಪಾಟಲೀಪುತ್ರದಲ್ಲಿ ನಡೆಯುವ ಸಂಗತಿಗಳನ್ನೆಲ್ಲ ಸುಲಭವಾಗಿ ತಿಳಿದುಕೊಳ್ಳಲೋಸುಗ ಒಂದು ಹಂಚಿಕೆಯನ್ನು ಮಾಡಿದನು. ಇವನಿಗೆ ಇಂದುಶರ್ಮನೆಂಬ ಗೆಳೆಯನಿದ್ದನು. ಇವನು ಜ್ಯೋತಿಶ್ಶಾಸ್ತ್ರದಲ್ಲಿಯೂ ಮಾರಣವೇ ಮೊದಲಾದ ಅಭಿಚಾರಿಕಕ್ರಿಯೆಗಳಲ್ಲಿಯೂ ಬಹಳ ಹೆಸರಾದವನು. ಚಾಣಕ್ಯನು ತನ್ನ ಕಾರ್ಯಸಿದ್ಧಿಗೆ ಇವನನ್ನು ಉಪಯೋಗಿಸಿಕೊಳ್ಳಬಯಸಿ ನಂದರೊಡನೆ ಮೈತ್ರಿಯನ್ನು ಸಂಪಾದಿಸುವಂತೆ ಅವನಿಗೆ ಹೇಳಿಕಳುಹಿಸಿದನು.

ಇಂದುಶರ್ಮನು ಕ್ಷಪಣಕವೇಷವನ್ನು ತಾಳಿ ಜೀವಸಿದ್ಧಿಯೆಂದು ನಾಮಕರಣಮಾಡಿಕೊಂಡು ಬಹು ಚಮತ್ಕಾರವಾಗಿ ನಂದರ ಸ್ನೇಹವನ್ನು ಸಂಪಾದಿಸಿದನು. ಅದರಲ್ಲಿಯೂ ಮುಖ್ಯಮಂತ್ರಿಯಾದ ರಾಕ್ಷಸನಿಗೆ ಇವನು ಬಹು ಮೆಚ್ಚಿನ ಗೆಳೆಯನಾದನು. ನಂದರಾಗಲಿ ಅಮಾತ್ಯ ರಾಕ್ಷಸನಾಗಲಿ ಜೀವಸಿದ್ಧಿಯ ಮಂತ್ರಾಲೋಚನೆಯಿಲ್ಲದೆ ಯಾವ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಕಾರ್ಯವನ್ನೂ ಮಾಡುತ್ತಿರಲಿಲ್ಲ. ಎಲ್ಲ ಬಗೆಯ ರಾಜರಹಸ್ಯಗಳೂ ಜೀವಸಿದ್ಧಿಗೆ ಮೊದಲು ತಿಳಿದು ಆ ಮೇಲೆ ಕಾರ್ಯಮುಖಕ್ಕೆ ಬರುತ್ತಿದ್ದವು. ಅವನಿಗೆ ತಿಳಿದ ರಹಸ್ಯಗಳೆಲ್ಲವೂ ಒಡನೊಡನೆಯೇ ಚಾಣಕ್ಯನ ಕಿವಿಮುಟ್ಟುತ್ತಿದ್ದುವು. ಇದರಿಂದ ಚಾಣಕ್ಯನ ಕುಟಿಲೋಪಾಯಗಳಿಗೆ ಸುಗಮವಾದ ಮಾರ್ಗ ಕಲ್ಪನೆಯಾಯಿತು.

ಎರಡನೆಯದಾಗಿ ಚಾಣಕ್ಯನು ಹೂಡಿದ ಪ್ರತೀಕಾರೋಪಾಯವೆಂದರೆ ಪರ್ವತೇಶ್ವರನಿಗೂ ಚಂದ್ರಗುಪ್ತನಿಗೂ ಮೈತ್ರಿಯನ್ನುಂಟುಮಾಡಿದುದು. ಪರ್ವತೇಶ್ವರನಲ್ಲಿ ಅಪಾರವಾದ ಮ್ಲೇಚ್ಛಸೇನೆಯಿದ್ದಿತು. ನಂದರಾಜ್ಯದಲ್ಲಿ ಅರ್ಧಭಾಗವನ್ನು ಕೊಡುವುದಾಗಿ ಅವನಿಗೆ ಮಾತು ಕೊಟ್ಟು ಅವನ ನೆರವಿನಿಂದ ಮಗಧರಾಜಧಾನಿಯಾದ ಕುಸುಮಪುರಕ್ಕೆ ಮುತ್ತಿಗೆ ಹಾಕಿದನು. ನಂದರಿಗೆ ಅಮಾತ್ಯರಾಕ್ಷಸನ ಬೆಂಬಲವಿದ್ದುದರಿಂದ ಅವರು ಪರ್ವತೇಶ್ವರಚಂದ್ರಗುಪ್ತರೊಡನೆ ಸಂಧಿಮಾಡಿಕೊಳ್ಳದೆ ಯುದ್ಧವನ್ನೇ ಮಾಡಿದರು. ಯುದ್ಧ ಬಹು ಬಿರುಸಾಗಿ ನಡೆಯಿತು. ಇತ್ತಂಡದಲ್ಲಿಯೂ ಬಹು ಜನರು ಮಡಿದರು. ಆದ ನಷ್ಟ ಅಷ್ಟಿಷ್ಟಲ್ಲ. ಅಮಾತ್ಯರಾಕ್ಷಸನು ಎಷ್ಟೇ ಕಷ್ಟಪಟ್ಟರೂ ಪರ್ವತೇಶ್ವರನ ಅಪಾರ ಸೇನೆಯನ್ನೆದುರಿಸದೆ ಹೋದನು. ಕಡೆಗೆ ನವನಂದರೂ ಕಾಳಗದಲ್ಲಿ ಮಡಿದುಹೋದರು. ಯೋಧರು ಒಡೆಯನಿಲ್ಲದುದರಿಂದ ಮತ್ತಷ್ಟು ಬಲವುಡುಗಿ ದಿಕ್ಕುಪಾಲಾಗಿ ಓಡಿದರು. ಚಂದ್ರಗುಪ್ತಪರ್ವತೇಶ್ವರರಿಗೆ ಜಯ ಲಭಿಸಿತು.

ಹೀಗೆ ಜಯ ಲಭಿಸಿದ ಮಾತ್ರದಿಂದಲೆ ಮಹಾ ತಂತ್ರಿಯಾದ ಚಾಣಕ್ಯನಿಗೆ ತೃಪ್ತಿಯೇನೂ ಆಗಲಿಲ್ಲ. ಚಂದ್ರಗುಪ್ತನನ್ನು ನಂದರ ಹರಿಪೀಠದಮೇಲೆ ರೂಢಮೂಲವಾಗಿ ಕುಳ್ಳಿರಿಸಬೇಕೆಂದು ಅವನ ಸಂಕಲ್ಪ. ಅದಕ್ಕೆ ಇನ್ನೂ ಅನೇಕಾನೇಕ ಪ್ರತಿಬಂಧಕಗಳಿರುವುವೆಂದು ಅವನಿಗೆ ಚೆನ್ನಾಗಿ ತಿಳಿದಿದ್ದಿತು. ನವನಂದರ ತಂದೆ ಸರ್ವಾರ್ಥಸಿದ್ಧಿ ತಪೋವನ ಸೇರಿದ್ದುದು ಅವನಿಗೆ ತಿಳಿಯದಿರಲಿಲ್ಲ. ನಂದರ ಕಡೆ ಎಂಥವನೇ ಆಗಲಿ ಒಬ್ಬ ಪಿಳ್ಳೆ ಇದ್ದರೂ ಮೌರ್ಯನು ನಿರಾತಂಕವಾಗಿ ರಾಜ್ಯವನ್ನು ಅನುಭವಿಸಲು ಸಾಧ್ಯವಿಲ್ಲವೆಂದು ಅವನು ಬಗೆದನು. ಇದರ ಮೇಲಾಗಿ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ನಂದಪ್ರಭುಗಳಲ್ಲಿ ಅತ್ಯಂತಭಕ್ತಿಸಂಪನ್ನನಾದ ಅಮಾತ್ಯರಾಕ್ಷಸನಿನ್ನೂ ಜೀವದಿಂದಿದ್ದಾನೆ. ಅವನು ಹೇಗಾದರೂ ತನ್ನ ಪ್ರಭುಭಕ್ತಿಗನುಗುಣ ವಾಗಿ ಚಂದ್ರಗುಪ್ತನನ್ನುರುಳಿಸಲು ತಂತ್ರಮಾಡಿಯೇ ಮಾಡುತ್ತಾ ನೆಂಬುದು ನಿಶಿತಮತಿಯಾದ ಆ ಕೌಟಲ್ಯನಿಗೆ ತಿಳಿಯದಿರಲಿಲ್ಲ. ಅಲ್ಲದೆ ಪರ್ವತೇಶ್ವರನಿಗೆ ರಾಜ್ಯಾರ್ಧವನ್ನು ಕೊಡುವುದೊಂದು; ಕೊಡದಿದ್ದರೆ ಅಕೀರ್ತಿ; ಕೊಡಬೇಕು. ಕೊಟ್ಟರೂ ಕೊಟ್ಟಂತಾಗಬಾರದು. ಅಂತೂ ಇಂತೂ ನಂದರಾಜ್ಯವೆಲ್ಲವೂ ವೃಷಲಚಂದ್ರಗುಪ್ತನಿಗೇ ದಕ್ಕಬೇಕು. ಇವಿಷ್ಟನ್ನೂ ಅವನು ಸಾಧಿಸಬೇಕಾಗಿದ್ದಿತು.

ಇತ್ತ ರಾಕ್ಷಸನಾದರೊ ಒಡೆಯರು ಮಡಿದುಹೋದರೂ ಎದೆ ಕುಗ್ಗದೆ ಅವರ ರಾಜ್ಯವನ್ನು ಅವರ ವಂಶೀಯರಿಗಾದರೂ ದೊರಕಿಸ ಬಯಸಿ ಆ ಕಾರ್ಯಕ್ಕಾಗಿಯೆ ಹಗಲಿರುಳೂ ಶ್ರಮಿಸುತ್ತಿದ್ದನು. ಕುಸುಮಪುರ ಹಗೆಯವಶವಾದರೂ ಅಲ್ಲಿಯೇ ಇದ್ದುಕೊಂಡು ಮೌರ್ಯ ನನ್ನು ಕಪಟದಿಂದ ಕೊಂದು ತನ್ನ ಪ್ರಭುಗಳ ಆತ್ಮಗಳಿಗೆ ತೃಪ್ತಿಯನ್ನುಂಟು ಮಾಡಬೇಕೆಂದು ಸಂಕಲ್ಪಿಸಿದನು. ಇದಕ್ಕಾಗಿ ಅವನು ತನ್ನ ಗೆಳೆಯ ನಾದ ಜೀವಸಿದ್ಧಿಯೊಡನೆ ವಿಷಕನ್ಯೆಯನ್ನು ಚಂದ್ರಗುಪ್ತನಿಗೆ ಮೆಚ್ಚು ಕೊಟ್ಟು ಕಳುಹಿಸಿದನು. ಜೀವಸಿದ್ಧಿ ಚಾಣಕ್ಯನ ಗೆಳೆಯನೇ ಆಗಿದ್ದುದ ರಿಂದ ವಿಷಕನ್ಯೆಯ ವಿಷಯವೆಲ್ಲವೂ ಕೂಡಲೆ ಅವನಿಗೆ ತಿಳಿಯಿತು. ಆ ನಿಪುಣನು ಆ ಸನ್ನಿವೇಶವನ್ನೇ ತನ್ನ ಕಾರ್ಯಸಿದ್ಧಿಗೆ ಉಪಯೋಗಿಸಿ ಕೊಂಡು ವಿಷಕನ್ಯೆಯನ್ನು ಪರ್ವತೇಶ್ವರನ ಮೇಲೆ ಪ್ರಯೋಗಮಾಡಿದನು. ಪರ್ವತೇಶ್ವರನು ಆ ಕನ್ಯೆಯ ಅಸಾಧಾರಣ ರೂಪವೈಖರಿಗೆ ಸೋತು ಅಸುದೊರೆದನು. ಇದರಿಂದ ಪರ್ವತೇಶ್ವರನಿಗೆ ಕೊಡಬೇಕಾಗಿದ್ದ ರಾಜ್ಯಾರ್ಧವು ಮೌರ್ಯನಿಗೇ ಉಳಿಯಿತು. ಅಲ್ಲದೆ ಪರ್ವತೇಶ್ವರನ ಮರಣದಿಂದ ಚಾಣಕ್ಯನು ತನ್ನ ಸಂಕಲ್ಪಸೋಪಾನಗಳಲ್ಲಿ ಮೊಮ್ಮೊದಲ ನೆಯದನ್ನು ದಾಟದಂತಾಯಿತು. ಆ ತಂತ್ರಿ ಈ ವಿಷಕನ್ಯಾಪ್ರಸಂಗ ವನ್ನು ಇಷ್ಟಕ್ಕೇ ಬಿಡಲಿಲ್ಲ. ಅದನ್ನು ಚಂದ್ರಗುಪ್ತನ ಮೇಲೆ ಪ್ರಯೋ ಗಿಸಿದ ಅಮಾತ್ಯರಾಕ್ಷಸನಿಗೆ ಇದರಿಂದಲೇ ಅಪಖ್ಯಾತಿಯನ್ನು ತರಬಯಸಿ “ಚಂದ್ರಗುಪ್ತಮೌರ್ಯನ ಬಲವನ್ನು ಕುಗ್ಗಿಸಲೋಸುಗ ರಾಕ್ಷಸನು

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ವಿಷಕನ್ಯಾಪ್ರಯೋಗದಿಂದ ಪರ್ವತೇಶ್ವರನನ್ನು ಕೊಂದನು' ಎಂಬ ಸುಳ್ಳುಸುದ್ದಿಯನ್ನು ರಾಜ್ಯದಲ್ಲೆಲ್ಲ ಹರಡಿದನು.

ಪರ್ವತೇಶ್ವರನ ಮಗನಾದ ಮಲಯಕೇತು ಕುಸುಮಪುರದಲ್ಲಿಯೇ ಇದ್ದನು. ಅವನಾದರೂ ರಾಜ್ಯಾರ್ಧವನ್ನು ಕೇಳಿಯಾನೆಂದು ಶಂಕಿಸಿ ಕೌಟಿಲ್ಯನು ಅದಕ್ಕೂ ಒಂದು ಉಪಾಯವನ್ನು ತೆಗೆದನು. ಅವನಿಗೆ ಭಾಗುರಾಯಣ ಮತ್ತೊಬ್ಬ ಆಪ್ತಮಿತ್ರ. ಇವನನ್ನೇ ಈ ಕಾರ್ಯಕ್ಕೆ ಚಾಣಕ್ಯನು ಉಪಯೋಗಿಸಿಕೊಂಡನು. ಭಾಗುರಾಯಣ, ಮಲಯ ಕೇತುವಿಗೆ ಪರಮಮಿತ್ರನಂತೆ ತೋರ್ಪಡಿಸಿಕೊಳ್ಳುತ್ತ ಚಾಣಕ್ಯನ ಮೇಲೆ ದ್ವೇಷವನ್ನು ಸಾಧಿಸುವವನಂತೆ ನಟಿಸಿ ಒಳ್ಳೆಯ ಸಮಯವನ್ನು ನೋಡಿ, "ಕುಟಿಲನಾದ ಕೌಟಿಲ್ಯನು ವಿಷಕನ್ಯೆಯನ್ನು ಪ್ರಯೋಗಿಸಿ ನಿಮ್ಮ ತಂದೆಯನ್ನು ಕೊಲ್ಲಿಸಿದನು. ಅಯ್ಯೋ ಪಾಪ!" ಎಂದು ಅವನಿಗೆ ರಹಸ್ಯವನ್ನಾಗಿ ತಿಳಿಸಿದನು. ಮಲಯಕೇತು, ಇನ್ನು ತಾನು ರಾಜಧಾನಿ ಯಲ್ಲಿದ್ದುದಾದರೆ ತಂದೆಯ ಗತಿಯೇ ತನಗೂ ಆದೀತೆಂದು ಬೆದರಿ ಯಾರೊಬ್ಬರಿಗೂ ತಿಳಿಯದಂತೆ, ತಂದೆಗೆ ಅಪರಕ್ರಿಯೆಯನ್ನೂ ಮಾಡದೆ ಪಾಳೆಯವನ್ನು ಬಿಟ್ಟು ಓಡಿಹೋದನು.

ಹೀಗೆ ಪರ್ವತೇಶ್ವರನ ಕೊಲೆಯಾಗಿ ಅವನ ಮಗ ಮಲಯ ಕೇತುವೂ ಪಲಾಯನವಾಗಿ ಹೋದ ಮೇಲೆ ಚಾಣಕ್ಯನು ಪಟ್ಟಣದಲ್ಲೆಲ್ಲ ಈ ಸಮಾಚಾರವನ್ನು ಡಂಗುರದ ಮೂಲಕ ಸಾರಿಸಿ ಪರ್ವತೇಶ್ವರನಿಗೆ ಸಲ್ಲಬೇಕಾದ ರಾಜ್ಯಾರ್ಧವನ್ನು ಅವನ ತಮ್ಮನಾದ ವೈರೋಚಕನಿಗೆ ಸಲ್ಲಿಸಲಾಗುವುದೆಂದು ಪ್ರಚುರಪಡಿಸಿದನು. ಇದರಿಂದ ಅರ್ಧರಾಜ್ಯ ವನ್ನು ಕೊಡಬೇಕಾದೀತೆಂದು ಚಾಣಕ್ಯನು ಪರ್ವತೇಶ್ವರನನ್ನು ಕೊಲ್ಲಿಸಿ ದನು' ಎಂಬ ಅಪಖ್ಯಾತಿಯು ತಪ್ಪಿತು. ಇಲ್ಲಿಗೆ ಅವನ ತಂತ್ರಮಾರ್ಗದಲ್ಲಿ ಅಡ್ಡಿಯಾಗಿದ್ದ ಮೊದಲನೆಯ ಮುಳ್ಳು ಮುರಿದಂತಾಯಿತು.

ಚಾಣಕ್ಯನು ಅನುಸರಿಸಿ ಸಾಧಿಸಿದ ಕಾರ್ಯಭಾಗವೆಲ್ಲ ಅಮಾತ್ಯ ರಾಕ್ಷಸನಿಗೆ ತಿಳಿಯಿತು. ಚಾಣಕ್ಯಹತಕನು ತನ್ನ ಮೇಲೆ ಅಪಖ್ಯಾತಿ ಯನ್ನು ತೂರಿದ್ದರೂ ಅವನು ಚಾಣಕ್ಯನ ಬುದ್ಧಿಕೌಶಲವನ್ನು ನೋಡಿ ಬೆರಗಾಗದಿರಲಿಲ್ಲ. ಆದರೂ ತಾನು ಸಾಧಿಸಬೇಕೆಂದಿದ್ದ ಕಾರ್ಯವನ್ನಲ್ಲಿಗೆ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಬಿಡಲೂ ಇಲ್ಲ. ಅರಮನೆಯ ಅಧಿಕಾರಿಗಳನ್ನೇ ಸ್ವಾಧೀನಪಡಿಸಿಕೊಂಡು ಆ ಮೂಲಕವಾದರೂ ಮೌರ್ಯನನ್ನು ಕೊಲ್ಲಿಸಬಯಸಿದನು. ಕಾಂಚುಕೀಯ, ಶಿಲ್ಪಾಧಿಕಾರಿ ದಾರುವರ್ಮ, ರಾಜವೈದ್ಯ ಅಭಯದತ್ತ— ಇವರನ್ನು ಒಳಸಂಚಿಗೆ ಸೇರಿಸಿಕೊಂಡು ಬೇಕಾದಷ್ಟು ಹಣವನ್ನು ಕೊಟ್ಟು, ಸಮಯನಿರೀಕ್ಷಣೆಯಿಂದ ಕಾರ್ಯವನ್ನು ಸಾಧಿಸಬೇಕೆಂದು ಬೆಸಸಿದನು. ಅವರೂ ಅದಕ್ಕೊಪ್ಪಿದರು.

ಇತ್ತ ಚಾಣಕ್ಯನು ಚಂದ್ರಗುಪ್ತಮಹಾರಾಜನು ಪಟ್ಟಣಪ್ರವೇಶ ಮಾಡುವನೆಂದೂ ಅದಕ್ಕಾಗಿ ಪಟ್ಟಣವನ್ನೆಲ್ಲ ಅಲಂಕರಿಸತಕ್ಕದ್ದೆಂದೂ ಶಿಲ್ಪಿಗಳಿಗೆ ಆಜ್ಞಾಪಿಸಿದನು. ಶಿಲ್ಪಾಧಿಕಾರಿ ದಾರುವರ್ಮ, "ಆರ್ಯ, ನಿನ್ನ ಆಣತಿಯನ್ನು ನಿರೀಕ್ಷಿಸಿ ಮೊದಲೇ ಉತ್ತರ ಗೋಪುರದ್ವಾರದಲ್ಲಿ ಸ್ವರ್ಣತೋರಣಾದಿಗಳನ್ನು ಕಟ್ಟಿಸಿ ಶೃಂಗರಿಸಿದೆ" ಎಂಬ ಸುದ್ದಿಯನ್ನು ಚಾಣಕ್ಯನಿಗೇ ತಿಳಿಸಿದನು. ಚಾಣಕ್ಯನಿಗೆ ದಾರುವರ್ಮನು ಆ ರೀತಿ ಉತ್ತರಗೋಪುರದ್ವಾರವನ್ನು ಶೃಂಗರಿಸಿದುದರಲ್ಲಿ ಏನೋ ಮೋಸವಿರಬೇಕೆಂದು ತಟ್ಟನೆ ತೋರಿತು. ಆದರೆ ಅವನು ಆ ಭಾವವನ್ನು ಸ್ವಲ್ಪವೂ ತೋರಿಸಿಕೊಳ್ಳದೆ ಪ್ರಸನ್ನಮುಖಮುದ್ರೆಯನ್ನು ತಳೆದು ಅವನನ್ನಷ್ಟು ಹೊಗಳಿ, ಮೌರ್ಯನಲ್ಲಿ ಪ್ರಭುಭಕ್ತಿಯನ್ನಿಟ್ಟುಕೊಂಡು ಅವನ ಶ್ರೇಯಸ್ಸನ್ನು ಕೋರುತ್ತಿರುವುದಕ್ಕಾಗಿ ತನ್ನ ಸಂತೋಷವನ್ನು ವ್ಯಕ್ತಪಡಿಸಿದನು. ಇದರಿಂದ ದಾರುವರ್ಮನಿಗೆ ಉತ್ಸಾಹ ತುಂಬಿ ಬಂದಿತು. ತನ್ನ ಕಾರ್ಯ ನಡೆದು ಅಮಾತ್ಯರಾಕ್ಷಸನಿಗೆ ದಿಟವಾಗಿಯೂ ಸಂತೋಷವಾಗುವುದೆಂದು ಅವನು ಹಿಗ್ಗಿಹೋದನು. ಆದರೆ ಚಾಣಕ್ಯನ ಈ ಪ್ರಸನ್ನತೆಯ ಗುಟ್ಟೇ ಬೇರೆಯಾಗಿದ್ದಿತು.

ಗೊತ್ತಾಗಿದ್ದ ಸಮಯಕ್ಕೆ ಸರಿಯಾಗಿ ಚಾಣಕ್ಯನು ಚಂದ್ರಗುಪ್ತನನ್ನೂ, ವೈರೋಚಕನನ್ನೂ ನಂದರ ಸಿಂಹಪೀಠದ ಮೇಲೆ ಸಮಸಮವಾಗಿ ಕುಳ್ಳಿರಿಸಿ ಇಬ್ಬರಿಗೂ ರಾಜ್ಯವನ್ನು ಸಮಸಮವಾಗಿ ಹಂಚಿಕೊಟ್ಟು, ರಾಜ್ಯಾಭಿಷೇಕಕಾರ್ಯವನ್ನು ಸಾಂಗಗೊಳಿಸಿದನು. ಇದಾದ ಬಳಿಕ ಅವನು ಚಂದ್ರಗುಪ್ತನನ್ನು ಮಹಾವೈಭವದಿಂದ ಪುರಪ್ರವೇಶ ಮಾಡಿಸಲು ಬೇಕಾದ ಏರ್ಪಾಟುಗಳೆಲ್ಲವನ್ನೂ ಮಾಡಿದನು. ಪೌರರೆಲ್ಲರೂ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಹೊಸ ದೊರೆಯನ್ನು ಸಂದರ್ಶಿಸುವ ಕುತೂಹಲದಿಂದ ರಾಜಬೀದಿಯಲ್ಲೆಲ್ಲ ತಂಡತಂಡವಾಗಿ ಸೇರಿದರು. ಅರಸನು ಅರ್ಧರಾತ್ರಿಯಲ್ಲಿ ಪುರಪ್ರವೇಶಮಾಡುವನೆಂದು ಮೊದಲೇ ಪ್ರಕಟವಾಗಿದ್ದಿತು. ಚಾಣಕ್ಯನಾದರೋ ದಾರುವರ್ಮನ ತಂತ್ರಮರ್ಮವನ್ನರಿತಿದ್ದುದರಿಂದ ಚಂದ್ರಗುಪ್ತನ ಪಟ್ಟದಾನೆಯನ್ನು ಬಹು ಸುಂದರವಾಗಿ ಅಲಂಕರಿಸಿ ವೈರೋಚಕನಿಗೆ ಗುರುತೇ ದೊರಕದಷ್ಟು ಒಡವೆಗಳನ್ನಿಟ್ಟು, ಅವನೇ ಕಾಣಿಸದಷ್ಟು ಪುಷ್ಪಮಾಲಿಕೆಗಳನ್ನು ಹಾಕಿ ಸಿಂಗರಿಸಿ ಆನೆಯ ಮೇಲೆ ಕೂಡಿಸಿ, "ವೈರೋಚಕ, ಪರ್ವತೇಶ್ವರನ ಪಾಲಿಗೆ ಬಂದ ರಾಜ್ಯಾರ್ಧವನ್ನು ಕೈಕೊಂಡು ಪಟ್ಟಣವನ್ನು ಪ್ರಥಮತಃ ಪ್ರವೇಶಿಸಿ ಜನರನ್ನು ಸಂತೋಷಗೊಳಿಸು" ಎಂದು ಅವನನ್ನು ಉಬ್ಬಿಸಿ ಚಂದ್ರಗುಪ್ತನ ಬದಲು ಅವನನ್ನೇ ಕಳುಹಿಸಿದನು. ಅಂತೆಯೆ ಅವನು ಮೆರವಣಿಗೆ ಹೊರಟನು.

ಮೆರವಣಿಗೆ ಉತ್ತರಗೋಪುರದ್ವಾರದ ಬಳಿಗೆ ಬಂದಿತು. ಅಲ್ಲಿಯೇ ಸೂತ್ರದ ಬೊಂಬೆಗಳನ್ನಾಡಿಸಿ ಜನರನ್ನು ವಿನೋದಗೊಳಿಸುತ್ತಿದ್ದ ದಾರುವರ್ಮ ಪಟ್ಟದಾನೆಯನ್ನು ಕಂಡು ಚಂದ್ರಗುಪ್ತಮೌರ್ಯನೇ ಮೆರವಣಿಗೆ ಬರುತ್ತಿರುವುದಾಗಿ ಭಾವಿಸಿದನು. ಮೆರವಣಿಗೆ ತೋರಣದಡಿ ಬಂದೊಡನೆ ಅವನು ಆ ತೋರಣವನ್ನೇ ಕತ್ತರಿಸಿ ಕೆಡವಿದನು. ಅದು ಪಟ್ಟದಾನೆಯ ಮೇಲೆ ಕುಳಿತಿದ್ದ ವೈರೋಚಕನ ಮೇಲೆ ಬೀಳುವುದಕ್ಕೆ ಪ್ರತಿಯಾಗಿ ಮಾವುತನಾದ ಬರ್ಬರಕನ ಮೇಲೆ ಬಿದ್ದಿತು. ಕೂಡಲೆ ಬರ್ಬರಕನು ಮಡಿದುರುಳಿದನು. ಇನ್ನು ತನ್ನ ಪ್ರಾಣಕ್ಕೆ ಹೇಗೂ ಸಂಚಕಾರ ಬಂದಿತೆಂದು ನಿಶ್ಚಯಿಸಿ ಸೇಡನ್ನಾದರೂ ತೀರಿಸಿ ಪ್ರಾಣ ಬಿಡಬೇಕೆಂದು ದಾರುವರ್ಮನು ಆಯುಧವನ್ನು ಹಿರಿದು ವೈರೋಚಕನನ್ನು ಕೊಂದು ಕೆಡವಿದನು. ಆ ಪಾಪಿ ಅರಸನನ್ನೇ ಆ ರೀತಿ ಕೊಂದನೆಂದು ನೋಡುತ್ತಿದ್ದ ಜನರು ಹೆಂಟೆ ಹೊಡೆದೇ ಅವನನ್ನು ತೀರಿಸಿಬಿಟ್ಟರು. ಹೀಗೆ ರಾಕ್ಷಸಪ್ರಿಯನಾದ ದಾರುವರ್ಮನು ಚಂದ್ರಗುಪ್ತನನ್ನು ಕೊಲ್ಲಲು ಮಾಡಿದ ಹದನೆಲ್ಲ ಅವನ ಶ್ರೇಯಸ್ಸಿಗೇ ಕಾರಣವಾಯಿತು. ವೈರೋಚಕನ ವಧೆಯಾಗಿ ಸಂಪೂರ್ಣರಾಜ್ಯವೇ ಅವನ ಕರಗತವಾಯಿತು. ಇದಾದ ಮೇಲೆ ಚಾಣಕ್ಯನ ಸಲಹೆಯಂತೆ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಚಂದ್ರಗುಪ್ತನು ಯಾವ ಆಡಂಬರವೂ ಇಲ್ಲದೆ ನಂದರ ಅರಮನೆಯನ್ನು ಪ್ರವೇಶಿಸಿದನು.

ಆದರೆ ಚಾಣಕ್ಯನು ಶತ್ರುಶೇಷ ನಿರ್ಮೂಲವಾಗಿ ಅಳಿಯುವ ವರೆಗೂ ಸುಮ್ಮನೆ ಕೂಡುವವನಲ್ಲ. ಶಿಷ್ಯನಾದ ಚಂದ್ರಗುಪ್ತನು ಅರಮನೆ ಯನ್ನು ಪ್ರವೇಶಿಸಿ ಸುಖವಾಗಿಯೆ ಕಾಲಕಳೆಯುತ್ತಿದ್ದರೂ ಆಂತರಿಕ ವಾಗಿ ಅವನಿಗೆ ತಿಳಿಯದಂತೆಯೇ ರಾಕ್ಷಸನ ಕಪಟಸನ್ನಾಹ ನಡೆಯು ತ್ತಿದ್ದುದರ ಸೂಚನೆ ಕುಶಾಗ್ರಬುದ್ಧಿಯಾದ ಚಾಣಕ್ಯನಿಗೆ ತಿಳಿದು ಬಂದಿತು. ಅರಮನೆಯ ಅಧಿಕಾರಿಗಳ ಮೇಲೆಲ್ಲ ಅವನು ತೀಕ್ಷ್ಣವಾದ ದೃಷ್ಟಿಯನ್ನು ಪ್ರಸರಿಸಿ ಆಗಿಂದಾಗ್ಗೆ ಅವರ ಭಾವವನ್ನರಿತು ಅದಕ್ಕೆ ಪ್ರತೀಕಾರವನ್ನಾಲೋಚಿಸುತ್ತಿದ್ದನು. ಸಂದರ್ಭೋಚಿತವಾಗಿ ಆಗಿಂದಾಗ್ಗೆ ರಹಸ್ಯವಾಗಿ ಆ ಪ್ರತೀಕಾರಗಳನ್ನು ಕಾರ್ಯಮುಖಕ್ಕೂ ತರುತ್ತಿದ್ದನು.

ಅಸಮಸಾಹಸಿಯಾದ ಅಮಾತ್ಯರಾಕ್ಷಸನ ಕುತಂತ್ರಕ್ಕೆ ನೆರವಿಗ ನಾದ ರಾಜವೈದ್ಯ ಅಭಯದತ್ತನು ಚಂದ್ರಗುಪ್ತನನ್ನು ಸಂದೇಹಕ್ಕೆಡೆ ಯಿಲ್ಲದೆಯೇ ತೀರಿಸಬೇಕೆಂದು ಹವಣಿಸಿದನು. ಒಂದುದಿನ ಅವನು ಔಷಧವನ್ನು ಕೊಡುವ ನೆಪದಿಂದ ಚಂದ್ರಗುಪ್ತನಿಗೆ ವಿಷವನ್ನೇ ಕೊಡ ಹೋದನು. ಆಗ ಚಾಣಕ್ಯನೂ ಅಲ್ಲಿಯೇ ಇದ್ದನು. ಅವನು "ಆರ್ಯ, ಅರಸರು ಯಾವ ವಸ್ತುವನ್ನೇ ಆದರೂ ಇತರರಿಗೆ ಕೊಟ್ಟ ಹೊರತು ತಾವು ಪರಿಗ್ರಹಿಸುವುದಿಲ್ಲ. ಆದುದರಿಂದ ಇದನ್ನು ನೀನು ಮೊದಲು ತೆಗೆದು ಕೊಳ್ಳುವುದಾಗಲಿ" ಎಂದನು. ಅಭಯದತ್ತನಿಗೆ ಏನೂ ತೋರದಾ ಯಿತು. ಕಡೆಗೆ ನಿರ್ವಾಹವಿಲ್ಲದೆ ಆ ವಿಷವನ್ನು ಕುಡಿದು ಅಸುವನ್ನು ನೀಗಿದನು.

ಈ ಸಂಗತಿ ನಡೆದು ಕೆಲವುದಿನಗಳಾದುವು. ಚಂದ್ರಗುಪ್ತನನ್ನು ಸಂಹರಿಸುವ ಯೋಚನೆಯಲ್ಲಿಯೇ ತೊಡಗಿದ್ದ ರಾಕ್ಷಸನು ಮತ್ತೊಂದು ಉಪಾಯವನ್ನು ಹೂಡಿದನು. ಅವನು ಚಂದ್ರಗುಪ್ತನ ಶಯನಗೃಹ ದಲ್ಲಿಯೇ ಅವನನ್ನು ವಧಿಸಬೇಕೆಂದು ಬಯಸಿ, ಶಯನಗೃಹದಡಿ ಸುರಂಗ ವನ್ನು ಕೊರೆಯಿಸಿ ತನ್ನ ಕಡೆಯವರನ್ನು ಅಲ್ಲಿ ಸೇರಿಸಿದನು. ಇದೂ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಚಾಣಕ್ಯಪಂಡಿತನ ದೃಷ್ಟಿಗೆ ಬೀಳದಿರಲಿಲ್ಲ. ಅರಮನೆಯ ಯಾವ ನಿಟ್ಟೀ ಆಗಲಿ ಅದನ್ನು ಸಂಶಯದೃಷ್ಟಿಯಿಂದಲೇ ನಿರುಕಿಸುವ ಅವನಿಗೆ ಚಂದ್ರಗುಪ್ತನ ಶಯನಾಗಾರದಲ್ಲಿ ಗೋಡೆಯ ಅಂಚಿನಿಂದ ಇರುವೆಸಾಲು ಬೆಂದ ಅಗುಳುಗಳನ್ನು ಕಚ್ಚಿಕೊಂಡು ಹೋಗುತ್ತಿರುವುದು ಅವನ ಕಣ್ಣಿಗೆ ಬಿತ್ತು. ಜನವಿಲ್ಲದೆಡೆ ಅಗುಳುಗಳೆಲ್ಲಿ ಬರಬೇಕು? ಇಲ್ಲಿ ಎಲ್ಲಿಯೋ ಹಗೆಗಳೇ ಅಡಗಿರಬೇಕು—ಎಂದು ನಿರ್ಧರಿಸಿ ಅವನು ಆ ಸುತ್ತಮುತ್ತ ಇದ್ದ ಸಂದುಗೊಂದುಗಳನ್ನೆಲ್ಲ ಮುಚ್ಚಿಸಿ ಬೆಂಕಿಯಿಟ್ಟು ಚೆನ್ನಾಗಿ ಸುಡಿಸಿದನು. ಸುರಂಗದಲ್ಲಿ ಅಡಗಿದ್ದ ಧೂರ್ತರೆಲ್ಲರೂ ಸಾಕಾದಷ್ಟು ವಾಯು ಸಂಚಾರವಿಲ್ಲದೆ ಸತ್ತರು. ಇದಾದ ಬಳಿಕ ಚಾಣಕ್ಯನು ಸುರಂಗಮಾರ್ಗ ವೇರ್ಪಟ್ಟು, ಧೂರ್ತರಡಗಿ, ಸಂಧಾನ ನಡೆಯಬೇಕಾದರೆ ಶಯ್ಯಾಗಾರದ ಅಧಿಕಾರಿ ಪ್ರಮೋದಕನ ಸಹಾಯವಿಲ್ಲದೆ ಹೇಗೆ ಸಾಧ್ಯ? ಇತ್ತೀಚೆಗೆ ಪ್ರಮೋದಕನು ಬಹಳ ಹಣವಂತನಾಗಿ ಬಹು ಜಂಬದ ಜೀವನವನ್ನು ಮಾಡುತ್ತಿದ್ದಾನೆ. ಇವನು ರಾಕ್ಷಸಪಕ್ಷಪಾತಿಯಾಗಿಲ್ಲದಿದ್ದರೆ ಇವನಿಗೆ ಹಣವೆಲ್ಲಿಂದ ಬರಬೇಕು? ಆದುದರಿಂದ ಇವನು ಅಪರಾಧಿಯೇ ಸರಿ—ಎಂದು ನಿರ್ಧರಿಸಿದನು. ಅವನನ್ನು ಕರೆಯಿಸಿ ಶಯನಾಗಾರಕ್ಕೆ ಸಂಬಂಧಿಸಿದಂತೆ ಕೆಲವು ಪ್ರಶ್ನೆಗಳನ್ನೂ ಕೇಳಿದನು. ಇದ್ದಕ್ಕಿದಂತೆಯೇ ತನಗೆ ಆ ಪ್ರಶ್ನೆಗಳು ಬಂದುದರಿಂದ ಪ್ರಮೋದಕನು ಒಂದಕ್ಕೊಂದು ಸಂಬಂಧವಿಲ್ಲದೆ ಕಕ್ಕುಬಿಕ್ಕಾಗಿ ಉತ್ತರಗಳನ್ನು ಕೊಡತೊಡಗಿದನು. ಅವನ ಆ ಉತ್ತರಗಳೇ ಅವನ ಮೇಲೆ ಅಪರಾಧವನ್ನು ಹೊರಿಸಿದುವು. ಸುಲಭಕೋಪನನಾದ ಚಾಣಕ್ಯನು ಒಡನೆಯೇ ಅವನನ್ನು ಕರೆದೊಯ್ದು ಶಿರಶ್ಛೇದನ ಮಾಡತಕ್ಕದ್ದೆಂದು ಚಂಡಾಲರಿಗೆ ಅಪ್ಪಣೆಮಾಡಿದನು. ಹೀಗೆ ರಾಕ್ಷಸನ ಮತ್ತೆರಡು ಪ್ರತೀಕಾರಪ್ರಯತ್ನಗಳೂ ಮುರಿದು ಬಿದ್ದುವು. ಇಂತಹ ಎಷ್ಟೇ ಗಂಡಗಳು ಬಂದೊದಗಿದರೂ ಚಾಣಕ್ಯನು ಅವುಗಳನ್ನು ಮೊದಮೊದಲೇ ಹುಟ್ಟಡಗಿಸಿ ಚಂದ್ರಗುಪ್ತನನ್ನು ರಕ್ಷಿಸಿದನು. ತೀವ್ರವಾದ ತನ್ನ ಬುದ್ಧಿಕೌಶಲದಿಂದಲೂ ದರ್ಪದಿಂದಲೂ ಅವನು ಬಹು ಬೇಗನೆಯೇ ರಾಜ್ಯದ ಪ್ರಜೆಗಳಲ್ಲಿ ಅದೊಂದು ಬಗೆಯ ಭೀತಿಯನ್ನೂ ರಾಜಭಕ್ತಿಯನ್ನೂ ಉಂಟುಮಾಡಿದನು.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಇತ್ತ ರಾಕ್ಷಸನಾದರೋ ತನ್ನ ಪ್ರಯತ್ನಗಳೆಲ್ಲ ಒಂದೊಂದಾಗಿ ವಿಫಲವಾಗುತ್ತಬರಲು ರಾಜಧಾನಿಯನ್ನೇ ತೊರೆದು ಪರ್ವತೇಶ್ವರನ ಮಗನಾದ ಮಲಯಕೇತುವನ್ನಾಶ್ರಯಿಸಿಯಾದರೂ ಚಂದ್ರಗುಪ್ತ ಚಾಣಕ್ಯರಮೇಲೆ ಹಗೆ ತೀರಿಸಿ ನಂದಪ್ರಭುಗಳ ಆತ್ಮಕ್ಕೆ ಶಾಂತಿಯನ್ನುಂಟುಮಾಡಬಯಸಿದನು. ಹೆಂಡತಿ ಮಕ್ಕಳನ್ನು ಗೆಳೆಯನಾದ ರತ್ನ ವ್ಯಾಪಾರಿ ಚಂದನದಾಸನ ರಕ್ಷಣೆಗೆ ಒಪ್ಪಿಸಿ ಮಲಯಕೇತುವಿನ ಬಳಿಗೆ ಆಶ್ರಯಕ್ಕಾಗಿ ಹೊರಟನು. ಮೌರ್ಯನನ್ನು ಕೊಂದು ನಂದರಾಜ್ಯ ವೆಲ್ಲವನ್ನೂ ಧಾರೆಯೆರೆಯುವುದಾಗಿ ಅವನಿಗೆ ಮಾತುಕೊಟ್ಟು ಅವನಿಗೆ ಆಪ್ತಮಂತ್ರಿಯಾಗಿ ನಿಂತನು. ಮಲಯಕೇತುವಿಗೂ ಮೌರ್ಯನ ಮೇಲೆ ಹಗೆ ತೀವ್ರವಾಗಿದ್ದಿತು. ಸೇಡನ್ನು ತೀರಿಸಿಕೊಳ್ಳಬೇಕೆಂದೇ ಹಗಲಿರುಳೂ ಪ್ರಯತ್ನಿಸುತ್ತಿದ್ದನು. ಅಮಾತ್ಯರಾಕ್ಷಸನ ನೆರವೂ ದೊರೆತು ತನ್ನ ಪ್ರಯತ್ನ ಸಫಲವಾದೀತೆಂದು ನಂಬುಗೆಯಾದ ಮೇಲೆ ಅವನು ಮ್ಲೇಚ್ಛಸೇನೆಗಳನ್ನೆಲ್ಲ ಕುಸುಮಪುರದ ದಂಡಯಾತ್ರೆಗೆ ಸಿದ್ಧಗೊಳಿಸತೊಡಗಿದನು. ಸ್ವಲ್ಪಕಾಲದಲ್ಲಿಯೇ ಪ್ರಚಂಡಸೇನೆ ಸಿದ್ಧ ವಾಯಿತು. ದಂಡಯಾತ್ರೆ ಹೊರಡುವುದೊಂದೇ ಉಳಿದಿದ್ದ ಕಾರ್ಯ.

ಚಾಣಕ್ಯನಿಗೆ ಈ ಸುದ್ದಿ ಬೇಹಿನವರ ಮೂಲಕ ತಿಳಿದುಬಂದಿತು. ನಿಶಿತಮತಿಯಾದ ರಾಕ್ಷಸನಿನ್ನೂ ಚೇಷ್ಟೆಮಾಡುತ್ತಿರುವುದು ಅವನಿಗೆ ಮತ್ತಷ್ಟು ರೋಷವನ್ನುಂಟುಮಾಡಿತು. ರಾಕ್ಷಸನು ಹಗೆಯನ್ನೇ ಸಾಧಿಸುತ್ತ ಎದುವರೆಗೆ ಹೊರಗಿರುವನೋ ಅದುವರೆಗೆ ವೃಷಲನು ನಿರಾತಂಕವಾಗಿ ರಾಜ್ಯವಾಳಲು ಸಾಧ್ಯವಿಲ್ಲವೆಂದೇ ಅವನ ಎಣಿಕೆ. ರಾಕ್ಷಸನ ಮೇಲೆ ಅವನಿಗೆ ಯಾವೊಂದು ಬಗೆಯ ದ್ವೇಷಾಸೂಯೆಗಳೂ ಇರಲಿಲ್ಲ. ರಾಜನೀತಿಯಲ್ಲಿ ರಾಕ್ಷಸನಿಗಿದ್ದ ಪ್ರೌಢಿಮೆಗೆ, ಅವನ ಪ್ರಭುಭಕ್ತಿಗೇ ಅಲ್ಲದೆ ಅವನು ಸಂಪಾದಿಸಿದ್ದ ಜನಾನುರಾಗಕ್ಕೆ ಗುಣಾಢ್ಯನಾದ ಆ ಚಾಣಕ್ಯನು ಬೆರಗಾಗಿ ಹೋಗಿದ್ದನು. ಅಂತಹ ಮೇಧಾವಿಯ ಸಹಾಯ ಸಂಪತ್ತಿ ದೊರೆತರೆ ವೃಷಲನ ರಾಜ್ಯ ಅಜರಾಮರವಾಗುವುದೆಂದು ಅವನ ಮನಸ್ಸಿಗೆ ತೋರಿತು. ಹೇಗಾದರೂ ರಾಕ್ಷಸನನ್ನು ಕರೆತಂದು ತನ್ನ ಶಿಷ್ಯನ ಮಹಾಮಾತ್ಯನನ್ನಾಗಿಸಿ ತನ್ನ ತಲೆಯಮೇಲಿದ್ದ ಭಾರವನ್ನೆಲ್ಲ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಇಳುಹಿಕೊಂಡು ಆಶ್ರಮಕ್ಕೆ ಹಿಂತಿರುಗಬೇಕೆಂದು ಅವನು ಸಂಕಲ್ಪಿಸಿದನು. ಹಾಗಲ್ಲದೆ ತಾನೇ ಮಂತ್ರಿತ್ವವನ್ನು ವಹಿಸಿ ಅಧಿಕಾರವನ್ನು ನಡೆಯಿಸಿ ಹೆಮ್ಮೆಪಡಬೇಕೆಂಬ ಹಂಬಲು ಆ ನಿಸ್ಪೃಹನ ಹೃದಯದಲ್ಲಿ ಸ್ವಲ್ಪವೂ ಮೂಡಿರಲಿಲ್ಲ. ಮುಖ್ಯವಾಗಿ ಅವನಿಗೆ ಬೇಕಾಗಿದ್ದುದು ಪ್ರಜೆಗಳ ಸೌಖ್ಯ. ರಾಷ್ಟ್ರದಲ್ಲಿ ಶಾಂತಿ ನೆಲಸಿದ್ದರೆ ಯಾರೂ ಕಣ್ಣಿಗೆಕಾಣದ ಸ್ವರ್ಗಸುಖಕ್ಕೆ ಕೈಯಾನರೆಂಬುದನ್ನು ಅವನು ಅರಿತಿದ್ದನು. ಅವನಿಗೆ ಬ್ರಾಹ್ಮಣಿಕೆಯಲ್ಲಿ ಅಪರಿಮಿತವಾದ ಶ್ರದ್ಧೆ; ಎಲ್ಲಿಯೋ ಒಂದುಕಡೆ ಕುಳಿತು ಯಾವ ಗೋಜೂ ಇಲ್ಲದೆ ಸ್ನಾನಾಹ್ನಿಕಗಳನ್ನು ಮಾಡಿಕೊಂಡು ಶಿಷ್ಯರಿಗಷ್ಟು ವೇದಾಕ್ಷರಗಳನ್ನು ಹೇಳಿ ದೇವ ಋಷಿ ಪಿತೃ ಋಣಗಳನ್ನು ತೀರಿಸಿ ಸಾತ್ವಿಕಜೀವನವನ್ನು ನಡಸುತ್ತಿದ್ದು ಜನ್ಮಸಾರ್ಥಕ್ಯವನ್ನು ಪಡೆಯಬೇಕೆಂಬುದೇ ಅವನಿಗಿದ್ದ ಆಕಾಂಕ್ಷೆ. ಆದರೆ, ತನ್ನ ಪ್ರತಿಜ್ಞೆ ಈಡೇರಬೇಕು. ಅದಕ್ಕಾಗಿ ಏನೇ ಆದರೂ ಮಾಡಿ ಸಾಧಿಸಬೇಕೆಂಬುದು ಅವನಿಗಿದ್ದ ಛಲ. ಇದರಿಂದ ಅವನು ರಾಕ್ಷಸನನ್ನು ವಶಪಡಿಸಿಕೊಳ್ಳಲೋಸುಗವೇ ಪ್ರಯತ್ನಗಳನ್ನು ಮಾಡತೊಡಗಿದನು.

ರಾಕ್ಷಸನು ಮಲಯಕೇತುವನ್ನು ಆಶ್ರಯಿಸುವ ಮೊದಲೇ ಕುಸುಮಪುರದಲ್ಲಿ ಕೆಲವು ಮಂದಿ ಅಧಿಕಾರಿಗಳನ್ನು ತನ್ನ ಒಳಸಂಚಿಗೆ ಸೇರಿಸಿಕೊಂಡು ಅವರು ಚಂದ್ರಗುಪ್ತಚಾಣಕ್ಯರಿಗೆ ವಿರುದ್ಧವಾಗಿಯೇ ನಡೆಯಬೇಕೆಂದು ಏರ್ಪಡಿಸಿದ್ದನು. ಅಂತೆಯೆ ಅವರು ಆಗಿಂದಾಗ್ಗೆ ತಮ್ಮ ಬಣ್ಣವನ್ನು ತೋರಿಸಿಕೊಳ್ಳುತ್ತಲೂ ಇದ್ದರು. ಇದು ಚಾಣಕ್ಯನಿಗೆ ತಿಳಿಯದೆಯೂ ಇರಲಿಲ್ಲ. ಅವನೂ ಲಗುಬಿಗಿಗಳನ್ನು ನೋಡಿಕೊಂಡು ಅವರನ್ನು ಮಿತಿಮೀರಿ ಹೋಗದಂತೆ ಅಂತೂ ಇಂತೂ ನಡಸಿಕೊಂಡು ಬರುತ್ತಿದ್ದನು. ತೀರ ಅಸಾಧ್ಯಪ್ರಸಂಗಗಳಲ್ಲಿ ದಂಡೋಪಾಯಕ್ಕೆ ಕೈಹಾಕುತ್ತಿದ್ದನು. ಮಲಯಕೇತುವಿನ ಬೆಂಬಲ ರಾಕ್ಷಸನ ಕಪಟ ಕೋಲಾಹಲಕ್ಕೆ ಮೂಲವೆಂಬುದು ಅವನಿಗೆ ಅರಿವಾದ ಮೇಲೆ ಮೊದಲು ಅದನ್ನೇ ಕೊಡೆದುಹಾಕಬೇಕೆಂದು ಸಂಕಲ್ಪಿಸಿದನು. ಮಿತ್ರನಾದ ಭಾಗುರಾಯಣನನ್ನು ಕರೆಯಿಸಿ ಮ್ಲೇಚ್ಛರಾಜನಿಗೂ ರಾಕ್ಷಸನಿಗೂ ವೈಮನಸ್ಯವನ್ನು ತಂದೊಡ್ಡಬೇಕೆಂದು ಆಜ್ಞಾಪಿಸಿ ಕಳುಹಿಸಿದನು.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಭದ್ರಭಟನೇ ಮೊದಲಾದ ರಾಜಪುರುಷರನ್ನು ಅರಸನಿಗೆ ಕೇವಲ ವಿರೋಧಿಗಳೆಂಬ ನೆಪವನ್ನು ಹೂಡಿ ಕುಸುಮಪುರದಿಂದ ಹೊರಸಾಗಿಸಿ ಭಾಗುರಾಯಣನಿಗೆ ಸಹಾಯಕರಾಗಿರತಕ್ಕುದೆಂದು ನಿಯಮಿಸಿದನು. ಇದಾದ ಬಳಿಕ ರಾಜಧಾನಿಯಲ್ಲಿ ರಾಕ್ಷಸನ ಮೂಲಕ ನಡೆಯುವ ಒಳಸಂಚುಗಳನ್ನು ತಿಳಿಯಬಯಸಿ ನಿಪುಣಕನೆಂಬ ಬುದ್ಧಿಶಾಲಿಯಾದ ತನ್ನ ನಚ್ಚಿನ ಆಳನ್ನು, "ಮಾರುವೇಷದಿಂದ ಸಂಚರಿಸುತ್ತಿದ್ದು ನಗರದಲ್ಲಿ ನಡೆಯುವ ಸುದ್ದಿಗಳನ್ನು ತಿಳಿದು ಹೇಳುತ್ತಿರು" ಎಂದು ಆಜ್ಞಾಪಿಸಿದನು.

ನಿಪುಣಕನು ಭಿಕ್ಷುಕನ ವೇಷವನ್ನು ತಾಳಿ ಯಮಪಟವನ್ನು ಹರಡಿ ಹಾಡುಗಳನ್ನು ಹಾಡುತ್ತಾ ಅಲ್ಲಲ್ಲಿ ಸೇರಿದ ಜನಸಂದಣಿಗೆ ಯಮಲೋಕದ ಸಂಗತಿಗಳನ್ನು ತಿಳಿಸಿ ಅಲ್ಲಲ್ಲಿಯೇ ನಡೆಯುವ ಕಾರ್ಯಗಳನ್ನೂ, ತಿಳಿದು ಬರುವ ಸುದ್ದಿಗಳನ್ನೂ ಗ್ರಹಿಸುತ್ತಿದ್ದನು. ಒಂದುದಿನ ಅವನು ಚಾಣಕ್ಯನನ್ನು ಕಂಡು, "ಆರ್ಯ, ಪ್ರಜೆಗಳೆಲ್ಲರೂ ಪ್ರಭುಗಳ ವಿಷಯದಲ್ಲಿ ಅನುರಕ್ತರಾಗಿಯೆ ಇದ್ದಾರೆ. ಆದರೆ ಮೂವರು ಮಾತ್ರ ವಿರೋಧಿಗಳಾಗಿರುವರೆಂದು ತಿಳಿದು ಬರುತ್ತದೆ. ಅವರಲ್ಲಿ ಮೊದಲನೆಯವನು ಪ್ರಭುವನ್ನು ಕೊಲ್ಲಲು ವಿಷಕನ್ಯೆಯನ್ನು ನಿರ್ಮಾಣಮಾಡಿದ ಜೀವಸಿದ್ಧಿ. ಎರಡನೆಯವನು ಶಕಟದಾಸ. ಮೂರನೆಯವನು ರತ್ನವ್ಯಾಪಾರಿಯಾದ ಚಂದನದಾಸ. ಇವರು ಮೂವರೂ ರಾಕ್ಷಸಪಕ್ಷಪಾತಿಗಳಾಗಿದ್ದಾರೆ. ರಾಕ್ಷಸನು ತನ್ನ ಸಂಸಾರವನ್ನು ಚಂದನದಾಸನ ಮನೆಯಲ್ಲಿರಿಸಿದ್ದಾನೆ. ಅದು ನನಗೆ ತಿಳಿದ ಬಗೆ ಆಶ್ಚರ್ಯಕರವಾಗಿದೆ. ಆರ್ಯನು ಲಾಲಿಸಬೇಕು. ನಾನು ಚಂದನದಾಸನ ಮನೆಯಬಳಿ ಯಮಪಟವನ್ನು ಹರಡಿ ಹಾಡು ಹೇಳತೊಡಗಿದೆನು. ಆ ವಿನೋದವನ್ನು ನೋಡಲೋಸುಗ ಸುಂದರಾಕೃತಿಯ ಬಾಲಕನೊಬ್ಬನು ಹೊರಬಂದನು. ಒಡನೆಯೆ "ಅಯ್ಯೋ, ಹೊರಹೋದನು!" ಎಂಬ ಕೂಗು ಕೇಳಿಸಿತು. ಒಬ್ಬ ಹೆಂಗಸು ಸರಕ್ಕನೆ ಆ ಕುಮಾರಕನನ್ನು ಎಳೆದುಕೊಂಡು ಹೋದಳು. ಆ ರಭಸದಲ್ಲಿ ಅವಳ ಕೈಬೆರಳಿನಲ್ಲಿದ್ದ ಉಂಗುರವು ಕಳಚಿ ಉರುಳಿಕೊಂಡು ಬಂದು ನನ್ನ ಕಾಲಡಿ ನಿಂತಿತು; ತೆಗೆದು ನೋಡುತ್ತೇನೆ; ರಾಕ್ಷಸನಾಮಾಂಕಿತವಾದ ಮುದ್ರಿಕೆ! ಇದೊ ಅದನ್ನೀಗ ಆರ್ಯನ ಪಾದ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಮೂಲಕನ್ನೊಪ್ಪಿಸಿದ್ದೇನೆ" ಎಂದು ಹೇಳಿ ಮುದ್ರೆಯುಂಗುರವನ್ನು ಚಾಣಕ್ಯನಿಗೊಪ್ಪಿಸಿದನು.

ರಾಕ್ಷಸನ ಮುದ್ರೆಯುಂಗುರ ಅನಿರೀಕ್ಷಿತವಾಗಿ ದೊರೆತುದು ಚಾಣಕ್ಯನಿಗೆ ರಾಕ್ಷಸನೇ ಕೈವಶವಾದಷ್ಟು ತೃಪ್ತಿ ಸಂತೋಷಗಳುಂಟಾ ದುವು. ಅವನು ನಿಪುಣಕನನ್ನು ಮಾತಿನಿಂದಲೇ ಬಹಳವಾಗಿ ಗೌರವಿಸಿ ಬೇಗನೆಯೇ ಅದಕ್ಕೆ ತಕ್ಕ ಫಲ ದೊರಕುವುದೆಂದು ನಂಬುಗೆಯಿತ್ತು ಬೀಳ್ಕೊಟ್ಟನು. ಇದೇ ಸಮಯದಲ್ಲಿಯೇ ಅರಮನೆಯಿಂದ ಚಾರ ನೊಬ್ಬನು ಬಂದು, "ಆರ್ಯ, ಪರ್ವತೇಶ್ವರನ ಭೂಷಣಗಳ ವಿನಿಯೋಗ ದಲ್ಲಿ ತಮ್ಮ ಅಭಿಪ್ರಾಯವೇನೆಂದು ಪ್ರಭುಗಳು ಅರಿಕೆಮಾಡುತ್ತಾರೆ" ಎಂದು ತಿಳಿಸಿದನು. ಚಾಣಕ್ಯನು ಬಹು ಬುದ್ಧಿವಂತಿಕೆಯಿಂದ "ಸಾಧು, ವತ್ಸ! ಲೋಕವ್ಯವಹಾರಗಳನ್ನು ಚೆನ್ನಾಗಿ ತಿಳಿದವನಾದೆ. ನಿನ್ನ ಮನ ಬಂದಂತೆ ನಡೆಯಬಹುದು. ಆದರೆ ಪರ್ವತೇಶ್ವರನು ಧರಿಸುತ್ತಿದ್ದ ಆ ಭೂಷಣಗಳು ಬಹು ಬೆಲೆಬಾಳುವಂಥವು. ಅವುಗಳನ್ನು ಗುಣಾಢ್ಯರಿಗೇ ದಾನಮಾಡಬೇಕು. ನಾನೇ ಪರೀಕ್ಷಿಸಿ ಅಂತಹ ಬ್ರಾಹ್ಮಣರನ್ನೇ ಕಳು ಹಿಸುತ್ತೇನೆ" ಎಂದು ಅರಸನಿಗೆ ಹೇಳೆಂದು ಅವನನ್ನು ಬೀಳ್ಕೊಟ್ಟನು.

ಪರ್ವತೇಶ್ವರನ ಭೂಷಣಗಳಿಂದಲೇ ರಾಕ್ಷಸನನ್ನು ಮಲಯ ಕೇತುವಿನಿಂದ ಭೇದಿಸುವ ಕಾರ್ಯಸಾಧನೆ ಮಾಡಬೇಕೆಂದು ಚಾಣಕ್ಯನು ಸಂಕಲ್ಪಿಸಿ, ಒಡನೆಯೇ ತನ್ನ ನಂಬುಗೆಯ ಆಳಾದ ಸಿದ್ಧಾರ್ಥಕನನ್ನು ಬರಮಾಡಿಕೊಂಡು, ಅವನಿಗೊಂದು ಪತ್ರವನ್ನು ಬರೆದುಕೊಟ್ಟು ಅದನ್ನು ಶಕಟದಾಸನಿಂದ ಬರೆಯಿಸಿ ತರಬೇಕೆಂದು ಆಜ್ಞೆಮಾಡಿದನು. ಸಿದ್ಧಾರ್ಥಕನು ಈ ಮೊದಲೇ ಚಾಣಕ್ಯನ ಬೋಧನೆಯಿಂದ ಶಕಟದಾಸ ನೊಡನೆ ಮೈತ್ರಿಯನ್ನು ಬೆಳಸಿದ್ದನು. ಅವನು ಹೋಗಿ ಕೇಳಿದೊಡನೆಯೇ ಅವನು ಪತ್ರವನ್ನು ನಕಲುಮಾಡಿಕೊಟ್ಟನು. ಸಿದ್ಧಾರ್ಥಕನು ಆ ಬರಹ ವನ್ನು ತಂದಬಳಿಕ ಚಾಣಕ್ಯನು ಅದಕ್ಕೆ ರಾಕ್ಷಸನ ಮುದ್ರೆಯುಂಗುರವ ನ್ನೊತ್ತಿಸಿ ಅದನ್ನು ಪ್ರಯೋಗಿಸುವ ಕೆಲವು ರಹಸ್ಯಗಳನ್ನು ಅವನಿಗೆ ತಿಳಿಸಿ ಬೀಳ್ಕೊಡುತ್ತಾ, "ಸಿದ್ಧಾರ್ಥಕ, ಶಕಟದಾಸನನ್ನು ಇನ್ನು ಕೆಲವೇ ದಿನ ಗಳೊಳಗಾಗಿ ಅಪರಾಧಿಯೆಂದು ನಿರ್ಣಯಿಸಿ ವಧ್ಯಸ್ಥಾನಕ್ಕೆ ಕಳುಹಲಾಗು

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ವುದು. ನೀನು ಪರಿಜನರೊಡನೆ ಮೊದಲೇ ಅಲ್ಲಿಗೆ ಹೋಗಿದ್ದು ಅವನನ್ನು ಬಿಡಿಸಿ ರಾಕ್ಷಸನ ಬಳಿ ಸೇರಿಸು. ಅವನು ತನಗೆ ಜೀವದಾನ ಮಾಡಿದವನು ನೀನೇ. ಎಂದು ನಿನ್ನ ವಿಷಯದಲ್ಲಿ ಬಹುಮಾನ ಹುಟ್ಟುವಂತೆ ರಾಕ್ಷಸನಿಗೆ ನಂಬುಗೆ ಹೇಳುತ್ತಾನೆ. ರಾಕ್ಷಸನೂ ನಿನ್ನನ್ನು ಹೊಗಳಿ ಬಹುಮತಿಸುತ್ತಾನೆ. ಅದನ್ನು ನೀನು ಸ್ವೀಕರಿಸಬೇಕು. ಮುದ್ರಿತ ಪತ್ರ, ಆ ಬಹುಮಾನ, ಈ ಮುದ್ರೆಯುಂಗುರ—ಇವುಗಳನ್ನು ಶಕಟದಾಸನಿಗೇ ಒಪ್ಪಿಸಿ ರಾಕ್ಷಸನನ್ನೇ ಎಡೆಬಿಡದೆ ಭಕ್ತಿಯ ಸೋಗಿನಿಂದ ಓಲೈಸುತ್ತಿದ್ದು ಸಮಯ ಬಂದಂದು ಇವೆಲ್ಲವನ್ನೂ ಮ್ಲೇಚ್ಛರಾಜನಾದ ಮಲಯಕೇತುವಿಗೆ ಪ್ರದರ್ಶಿಸಿ ಅವನಿಗೂ ರಾಕ್ಷಸನಿಗೂ ವೈರಸ್ಯವನ್ನು ತಂದೊಡ್ಡು. ಒಡನೆಯೇ ರಾಕ್ಷಸನಿಗೆ ಅಲ್ಲಿಂದ ವಿಮೋಚನೆಯಾಗಿಹೋಗುವುದು" ಎಂದು ಹೇಳಿದನು.

ಸಿದ್ಧಾರ್ಥಕನು ಚಾಣಕ್ಯನು ಹೇಳಿದುದೆಲ್ಲವನ್ನೂ ಚೆನ್ನಾಗಿ ಗ್ರಹಿಸಿ ಅಂತೆಯೇ ಎಸಗುವುದಾಗಿ ಬೀಳ್ಕೊಂಡನು. ಇದಾದ ಬಳಿಕ ಇತ್ತ ಚಾಣಕ್ಯನು ಜೀವಸಿದ್ಧಿಯನ್ನು ಕರೆಯಿಸಿ, "ಅಯ್ಯಾ, ಪರ್ವತೇಶ್ವರನನ್ನು ಕೊಂದ ಅಪರಾಧವನ್ನು ನಿನ್ನಮೇಲೆ ಹೊರಿಸಿ ನಿನ್ನನ್ನು ದೇಶಭ್ರಷ್ಟನನ್ನಾಗಿಸುತ್ತೇನೆ. ನೀನು ಮಲಯಕೇತುವನ್ನಾಶ್ರಯಿಸಿ ರಾಕ್ಷಸನಿಗೆ ಪ್ರಿಯನಾಗಿ ನಡೆಯುತ್ತ ಅಲ್ಲಿಯೇ ಇರತಕ್ಕುದು. ಅಲ್ಲಿ ನೀನು ನಮಗಾಗಿ ಮಾಡಬೇಕಾದ ಕಾರ್ಯಸಂಧಾನವನ್ನು ಕಾಲಾನುಕ್ರಮದಲ್ಲಿ ನಿನಗೆ ತಿಳಿಸುತ್ತೇನೆ" ಎಂದು ಹೇಳಿಕಳುಹಿಸಿದನು. ಜೀವಸಿದ್ಧಿ ತೆರಳಿದ ತರುವಾಯ ಆ ತಂತ್ರಿ ತನಗೆ ಬೇಕಾದ ಕೆಲವರು ಬ್ರಾಹ್ಮಣರನ್ನು ಕರೆದು ಅವರಿಗೆ ಪರ್ವತೇಶ್ವರನ ಭೂಷಣಗಳನ್ನು ಕೊಟ್ಟು, "ಅಯ್ಯಾ, ಇವುಗಳನ್ನು ಮ್ಲೇಚ್ಛರಾಜ್ಯದಲ್ಲಿ ನೆಲೆಗೊಂಡಿರುವ ಅಮಾತ್ಯರಾಕ್ಷಸನಿಗೆ ಮಾರಿ ಹಣ ಸಂಪಾದಿಸಿಕೊಳ್ಳಿರಿ" ಎಂದು ಹೇಳಿಕಳುಹಿಸಿದನು. ಇಷ್ಟೇ ಅಲ್ಲದೆ ಹಗೆಯೂರುಗಳಲ್ಲಿ ನಡೆಯುವ ಸುದ್ದಿಗಳನ್ನು ತಂದು ತಿಳಿಸಲು ಗೂಢಚಾರರನೇಕರನ್ನು ನೇಮಿಸಿದನು. ಅವನ ಊಹಾಪೋಹಗಳಿಗೆ ಸ್ವಲ್ಪವೂ ವ್ಯತಿರಿಕ್ತವಾಗದಂತೆ ಎಲ್ಲ ಕಾರ್ಯಗಳೂ ನಡೆಯತೊಡಗಿದುವು

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಇದಾದ ಕೆಲವು ದಿನಗಳ ಮೇಲೆ ಚಾಣಕ್ಯನು ರತ್ನವ್ಯಾಪಾರಿ ಚಂದನದಾಸನನ್ನು ತನ್ನ ಮನೆಗೆ ಕರೆಯಿಸಿದನು. ಚಾಣಕ್ಯನ ಕರೆ ಎಂದರೆ ಕಲ್ಲೆದೆಯ ಕಟ್ಟಾಳಿಗೂ ಹೆದರಿಕೆ. ಇನ್ನು ಚಂದನದಾಸನ ವಿಷಯದಲ್ಲಿ ಹೇಳಬೇಕಾದುದೇನು ? ರಾಕ್ಷಸನ ಸಂಸಾರವನ್ನು ತನ್ನ ಮನೆಯಲ್ಲಿ ಪೋಷಿಸುತ್ತಿದ್ದ ಅಪರಾಧಿ ಅವನು. ಭಯದಿಂದ ತತ್ತರಿಸುತ್ತಲೇ ಪ್ರವೇಶಿಸಿ ಚಾಣಕ್ಯನಿಗೆ ಮಣಿದನು. ಚಾಣಕ್ಯನೂ ಮೊದಮೊದಲು ತನ್ನ ಅಂತರಂಗವನ್ನೇ ಬಹಿರಂಗಗೊಳಿಸದೆ ಅವನೊಡನೆ ಕುಶಲಪ್ರಶ್ನೆಯಲ್ಲಿಯೆ ಸ್ವಲ್ಪ ಹೊತ್ತು ಕಳೆದನು. ಇದರಿಂದ ಚಂದನದಾಸನಿಗೆ ಸ್ವಲ್ಪಮಟ್ಟಿಗೆ ಉಸಿರಾಡುವಷ್ಟು ಮಾತ್ರ ಧೈರ್ಯವುದಿಸಿತು. ಅದನ್ನರಿತೊಡನೆಯೆ ಚಾಣಕ್ಯನು ಭೇದೋಪಾಯಕ್ಕೆ ಮೊದಲಿಟ್ಟನು.

ಚಾಣಕ್ಯ:—ಅಯ್ಯ, ಚಂದನದಾಸ ಶ್ರೇಷ್ಠಿ ! ಈ ನಮ್ಮ ಚಂದ್ರಗುಪ್ತನ ದೋಷಗಳು ಪ್ರಜಾವರ್ಗದಲ್ಲಿ ಪೂರ್ವರಾಜರ ಸ್ಮರಣೆಯನ್ನೇನೂ ತರುತ್ತಿಲ್ಲವಷ್ಟೆ?

ಚಂದನದಾಸ:—ಶಾಂತಂ ಪಾಪಂ ! ಶಾಂತಂ ಪಾಪಂ ! ಆರ್ಯ, ಶರತ್ಕಾಲದ ನಿಶೆಯಲ್ಲಿ ಉದಿಸಿದ ಪೂರ್ಣಚಂದ್ರನಿಂದೆಂತೋ ಅಂತು ಪ್ರಜೆಗಳೆಲ್ಲ ಚಂದ್ರಗುಪ್ತ ಮಹಾರಾಜರ ಪ್ರಭುತ್ವದಿಂದ ಸಂತೋಷಗೊಂಡಿದ್ದಾರೆ; ತೃಪ್ತರಾಗಿದ್ದಾರೆ.

ಚಾಣಕ್ಯ:—ಭೋ ಶ್ರೇಷ್ಠಿನ್ ! ನೀನು ಹೇಳುವುದು ದಿಟವಾಗಿದ್ದರೆ ಪ್ರೀತರಾಗಿರುವ ಪ್ರಜೆಗಳಿಂದ ಪ್ರಭುಗಳು ಪ್ರತಿಪ್ರಿಯವನ್ನು ಅಪೇಕ್ಷಿಸಬೇಕಲ್ಲವೆ ?

ಚಂದನ:—ಆರ್ಯನು ಅಜ್ಞಾಪಿಸಬೇಕು. ಈ ಜನದಿಂದ ಪ್ರಭುಗಳು ಎಷ್ಟುಮಟ್ಟಿಗೆ ಅಪೇಕ್ಷಿಸುತ್ತಾರೆ ಎಂದು.

ಚಾಣಕ್ಯ:—ಎಲಾ ಶೆಟ್ಟಿ, ಇದು ಚಂದ್ರಗುಪ್ತನ ರಾಜ್ಯ. ನಂದ ರಾಜ್ಯವಲ್ಲ. ತಿಳಿಯಿತೆ? ಅರ್ಥಾಭಿರುಚಿಯುಳ್ಳ ನಂದರಿಗೆ ಅರ್ಥಸಂಬಂಧ ಪ್ರೀತಿಯನ್ನು ತರತಕ್ಕುದಾಗಿದ್ದಿತು. ಚಂದ್ರಗುಪ್ತನಿಗೆ ಹಾಗಲ್ಲ. ನೀವೆಲ್ಲರೂ ಯಾವ ಕ್ಲೇಶವೂ ಇಲ್ಲದೆ ಸುಖವಾಗಿ ಬಾಳುವುದೊಂದೇ ಆತನಿಗೆ ಪ್ರಿಯವಾದುದು.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಚಂದನ:—ಆರ್ಯ, ಪರಮಾನುಗ್ರಹವಾಯಿತು.

ಚಾಣಕ್ಯ:—ಏನಯ್ಯಾ, ಆ ಸುಖ ಹೇಗೆ ದೊರೆಯುತ್ತದೆಯೆಂದು ನಮ್ಮನ್ನು ಕೇಳಬೇಡವೆ?

ಚಂದನ:—ಆರ್ಯನೇ ಆಜ್ಞಾಪಿಸಬೇಕು.

ಚಾಣಕ್ಯ—ಸಂಕ್ಷೇಪವಾಗಿ ಹೇಳುತ್ತೇನೆ. ಮುಖ್ಯವಾಗಿ ರಾಜನ ವಿಷಯ ದಲ್ಲಿ ವಿರುದ್ಧಭಾವನೆ ಇಲ್ಲದೆ ನಡೆಯತಕ್ಕುದು.

ಚಂದನ:—ಆರ್ಯ, ರಾಜನಲ್ಲಿ ವಿರೋಧಿಯಾಗಿರುವ ಅಂತಹ ಪಾಪಿಷ್ಠ ನಾರೆಂದು ಆರ್ಯನು ತಿಳಿದಿರುವುದು?

ಚಾಣಕ್ಯ:—ಅವರಲ್ಲಿ ನೀನೇ ಮೊದಲನೆಯವನು.

ಚಂದನ:—(ಕಿವಿಗಳನ್ನು ಮುಚ್ಚಿ) ಶಾಂತಂ ಪಾಪಂ! ಶಾಂತಂ ಪಾಪಂ! ಹುಲ್ಲಿಗೆ ಬೆಂಕಿಯ ವಿರೋಧವೆಂತಹುದು?

ಚಾಣಕ್ಯ:—ವಿರೋಧವೆ? ಹೀಗೆ. ನೀನು ಈಗ ರಾಜವಿರೋಧಿಯಾದ ಅಮಾತ್ಯರಾಕ್ಷಸನ ಸಂಸಾರವನ್ನು ನಿನ್ನ ಮನೆಯಲ್ಲಿ ರಕ್ಷಿಸು ತ್ತಿರುವುದು.

ಈ ಮಾತನ್ನು ಕೇಳಿದೊಡನೆಯೆ ಚಂದನದಾಸನಿಗೆ ಒಳಗೊಳಗೇ ಭಯವಡಸಿತು. ಆದರೂ ಧೈರ್ಯವನ್ನು ತಂದುಕೊಂಡು ದಿಟ್ಟತನದಿಂದ ಆ ಸುದ್ದಿ ಸುಳ್ಳೆಂದೇ ಸಾಧಿಸಿದನು. ಆದರೆ ಚಾಣಕ್ಯನು ಇಷ್ಟಕ್ಕೆಲ್ಲ ಸುಮ್ಮನಾಗುವವನಲ್ಲ. ಇದರ ಮೇಲೆ ಅವನಿಗೆ ಆ ವಿಷಯ ಸ್ಪಷ್ಟ ವಾಗಿಯೇ ತಿಳಿದಿದ್ದಿತು. ಆದರೂ ಚಂದನಧಾಸನು ಬಿಟ್ಟುಕೊಡದಿದ್ದರೆ ತನ್ನ ಕಾರ್ಯ ಕೆಡುವುದೆಂದು ಅವನಿಗೆ ಚೆನ್ನಾಗಿ ಗೊತ್ತಿದ್ದಿತು. ಯಾವ ಕುಟಿಲೋಪಾಯದಿಂದಾದರೂ ಚಂದನದಾಸನಿಂದ ಆ ಸುದ್ದಿಯನ್ನು ತೆಗೆಯಬೇಕೆಂದು ಅವನು ಯೋಚಿಸುತ್ತಿದ್ದನು. ಅಷ್ಟುಹೊತ್ತಿಗೆ ಸರಿ ಯಾಗಿ ರಾಜಬೀದಿಯಲ್ಲಿ ಕೋಲಾಹಲ ಧ್ವನಿಯೊಂದು ಕೇಳಬಂದಿತು. ಆ ಕೋಲಾಹಲಕ್ಕೂ ಚಾಣಕ್ಯನ ಕುಟಿಲತಂತ್ರವೇ ಕಾರಣ. ಅದನ್ನು ತಿಳಿದಿದ್ದರೂ ಅವನು ಶಿಷ್ಯಶಾರ್ಙ್ಗರವನನ್ನು ಕರೆದು, "ಅದೇನು ತಿಳಿದು ಬಾ" ಎಂದಟ್ಟಿದನು. ಶಾರ್ಙ್ಗರವನು ಹೋಗಿ ನೋಡಿ ಬಂದು "ಗುರುಗಳೆ, ಕ್ಷಪಣಕ ಜೀವಸಿದ್ಧಿಯನ್ನು ಪಟ್ಟಣದಿಂದಾಚೆಗೆ ಹೊರಡಿಸು

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ತ್ತಿದ್ದಾರೆ. ಈ ಕೋಲಾಹಲವೆಲ್ಲ ಅದೇ" ಎಂದು ಅರಿಕೆಮಾಡಿದನು. ಚಾಣಕ್ಯನು ರಾಜದ್ರೋಹಿಗಳ ವಿಷಯದಲ್ಲಿ ರಾಜನು ಅಂತಹ ಕಾಠಿನ್ಯವನ್ನು ತೋರಿಸುವುದು ಸಾಮಾನ್ಯವಾಗಿದೆಯೆಂದು ಸೂಚಿಸಿ, ಚಂದನದಾಸನನ್ನು ಮತ್ತೊಮ್ಮೆ ಬೆದರಿಸಿ ನೋಡಿದನು. ಆದರೇನು, ಚಂದನದಾಸನೆಂತಾದರೂ ಜಗ್ಗಲಿಲ್ಲ. ಆ ಹೊತ್ತಿಗೆ ಮತ್ತೆ ಜನರ ಕೋಲಾಹಲ. ಅದು ಶಕಟದಾಸನನ್ನು ಶೂಲಕ್ಕೇರಿಸಲು ಕರೆದೊಯ್ಯುತ್ತಿದ್ದುದರಿಂದ ಉಂಟಾದುದು. ಚಾಣಕ್ಯನು ಆ ಸನ್ನಿವೇಶವನ್ನುಪಯೋಗಿಸಿಕೊಂಡು "ಅಯ್ಯಾ ಶ್ರೇಷ್ಠಿ, ಸುಮ್ಮನೆ ಕೆಟ್ಟುಹೋಗಬೇಡ. ರಾಜನ ಉಗ್ರಕೋಪವನ್ನು ನೀನು ಕಂಡೇ ಇದ್ದೀಯೆ. ಈಗಲಾದರೂ ನನ್ನ ಮಾತನ್ನು ಕೇಳು. ರಾಕ್ಷಸನ ಸಂಸಾರವನ್ನು ತಂದೊಪ್ಪಿಸು. ವಿಚಿತ್ರವಾದ ರಾಜಪ್ರಸಾದವನ್ನನುಭವಿಸು" ಎಂದು ಪ್ರಲೋಭನಗೊಳಿಸಿದನು. ಚಂದನದಾಸನು ಅಲ್ಲಿಗೂ ಸಗ್ಗಲಿಲ್ಲ. ಇಷ್ಟೆ ಅಲ್ಲ, "ಆರ್ಯ, ನನ್ನನ್ನೇನು ಹೆದಸುತ್ತೀಯೆ? ಆ ನನ್ನ ಮಿತ್ರನ ಹೆಂಡತಿ ಮಕ್ಕಳು ಒಂದು ವೇಳೆ ನನ್ನ ಮನೆಯಲ್ಲಿದ್ದರೂ ಅವರನ್ನು ನಾನು ತಂದೊಪ್ಪಿಸುವವನಲ್ಲ. ಇನ್ನು ನನ್ನ ಮನೆಯಲ್ಲಿಯೇ ಇಲ್ಲದಿರುವಾಗ ಹೇಳುವುದೇನು?" ಎಂದು ಬಿಟ್ಟನು.

ಆತ್ಮತ್ಯಾಗಕ್ಕೂ ಸಿದ್ಧನಾಗಿ ಪುರಾಣಪುರುಷನಾದ ಶಿಬಿಯಂತೆ ಅನುಪಮವಾದ ಔದಾರ್ಯವನ್ನು ಮೆರೆದ ಆ ಶೆಟ್ಟಿಯ ವಿಷಯದಲ್ಲಿ ಆಂತರಿಕವಾಗಿ ಚಾಣಕ್ಯನು ಬಹುಸಂತೋಷಪಟ್ಟನು. ಆದರೂ ಅದನ್ನಿನಿತಾದರೂ ತೋರ್ಪಡಿಸಿಕೊಳ್ಳದೆ ಉಗ್ರಕೋಪವನ್ನು ತಂದುಕೊಂಡು, "ಎಲವೆಲವೊ, ದುಷ್ಟವಣಿಜ, ಹಾಗೊ? ರಾಜಕೋಪವನ್ನನುಭವಿಸಲು ಸಿದ್ಧನಾಗು" ಎಂದು ಗಜರಿದನು. ಶೆಟ್ಟಿ, "ಇದೊ ಸಿದ್ಧನಾಗಿದ್ದೇನೆ" ಎಂದು ಮರುನುಡಿದನು. ಚಾಣಕ್ಯನು ಚಂದನದಾಸನನ್ನೂ ಅವನ ಹೆಂಡತಿಮಕ್ಕಳನ್ನೂ ಸೆರೆಯಲ್ಲಿರಿಸತಕ್ಕದ್ದೆಂದು ಅಪ್ಪಣೆ ಮಾಡಿದನು. ಚಂದನದಾಸನು "ದೈವಯೋಗದಿಂದ ಗೆಳೆಯನಿಗಾಗಿ ನನಗೆ ವಿನಾಶವುಂಟಾಯಿತಾಗಲಿ ಪುರುಷದೋಷದಿಂದಲ್ಲ," ಎಂದುಕೊಂಡು ಸೆರೆಗೊಳಗಾಗಿ ಹೊರಟುಹೋದನು. ಇತ್ತ ಚಾಣಕ್ಯನು

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಇದೀಗ ರಾಕ್ಷಸನು ಸಿಕ್ಕಿದನು" ಎಂದು ಹಿರಿಹಿಗ್ಗಿದನು. ಚಂದನದಾಸನೆಂತು ಆಪತ್ಕಾಲದಲ್ಲಿ ರಾಕ್ಷಸನಿಗಾಗಿ ಲಕ್ಷ್ಯವೇ ಇಲ್ಲದೆ ತನ್ನ ಪ್ರಾಣಗಳನ್ನೊಪ್ಪಿಸಿದನೊ ಅಂತೇ ಆ ರಾಕ್ಷಸನೂ ಚಂದನದಾಸನಿಗಾಗಿ ಅಸುದೊರೆಯಲು ಹಿಂತೆಗೆಯುವುದದಿಲ್ಲವೆಂಬುದು ಆ ಸೂಕ್ಷ್ಮಮತಿಗೆ ಚೆನ್ನಾಗಿ ಗೊತ್ತಿದ್ದಿತು.

ಇದಾದ ಸ್ವಲ್ಪ ಹೊತ್ತಿನಲ್ಲಿಯೇ ಸಿದ್ಧಾರ್ಥಕನು ಚಂಡಾಲರನ್ನು ವಂಚಿಸಿ ಶಕಟದಾಸನನ್ನು ವಧ್ಯಸ್ಥಾನದಿಂದ ಕರೆದೊಯ್ದನೆಂದು ಚಾಣಕ್ಯನಿಗೆ ಶಿಷ್ಯನ ಮೂಲಕ ತಿಳಿದುಬಂದಿತು. ಅವನಿಗೆ ತನ್ನ ಅಪ್ಪಣೆಯು ಸರಿಯಾಗಿ ನಡೆಯುತ್ತಿರುವುದೆಂದು ಮನಸ್ಸಿಗೆ ತೃಪ್ತಿಯುಂಟಾದರೂ ತಂತ್ರಸಾಧನೆಗಾಗಿ ಗುಟ್ಟು ಹೊರಬೀಳದಿರುವದಕ್ಕಾಗಿಯೂ ಆ ಚಂಡಾಲರನ್ನೇ ವಧಿಸತಕ್ಕದ್ದೆಂದು ಆಜ್ಞಾಪಿಸಿದನು.

ಇಷ್ಟರಿಂದಲೇ ರಾಕ್ಷಸನನ್ನು ಮಲಯಕೇತುವಿನಿಂದ ಭೇದಿಸುವ ಕಾರ್ಯ ಸುಗಮವಾಗಲಾರದೆಂದು ಚಾಣಕ್ಯನಿಗೆ ತೋರಿತು. ತಾನು ರಾಜ್ಯದಲ್ಲಿ ಶಸ್ತ್ರಧಾರಿಯಾಗಿ ಪ್ರಭುತ್ವವನ್ನು ನಡಸುತ್ತಿರುವವರೆಗೂ ಆ ಕಾರ್ಯಕ್ಕೆ ಹೆಚ್ಚು ಕಾವು ಬರಲಾರದೆಂದು ಆ ನಿಪುಣನು ಮನಸ್ಸಿನಲ್ಲಿಯೇ ಗುಣಿತಮಾಡಿಕೊಂಡು ಒಂದು ದಿನ ಚಂದ್ರಗುಪ್ತನ ಬಳಿಗೈದಿ "ವೃಷಲ, ಇನ್ನು ಕೆಲವೇ ದಿನಗಳಲ್ಲಿ ನಾವು ಎಣಿಸಿರುವಂತೆ ಕಾರ್ಯ ಸಾಧನೆಯಾಗಬೇಕು. ರಾಕ್ಷಸನು ರಾಜ್ಯದಲ್ಲಿ ಮುಖ್ಯಮಂತ್ರಿಪದವಿಯನ್ನು ವಹಿಸಿ ನಿಲ್ಲಬೇಕು. ಆ ಸಮಯವು ಇಷ್ಟರಲ್ಲಿಯೇ ಒದಗುತ್ತದೆ. ಅದಕ್ಕಾಗಿಯೇ ಈಗೊಂದು ಉಪಾಯವನ್ನು ಮಾಡಬೇಕಾಗಿದೆ. ನೀನು ನನ್ನಲ್ಲಿ ಯಾವ ಸಂಕೋಚವೂ ಇಲ್ಲದೆ ವಿರೋಧವನ್ನು ನಟಿಸಬೇಕು. ಸಭೆಯಲ್ಲಿ ನನ್ನನ್ನು ಕುರಿತು ಲಾಘವವಾಗಿ ಮಾತನಾಡುತ್ತಿರಬೇಕು. ಇದರಿಂದ ಮಹತ್ಪ್ರಯೋಜನವುಂಟು" ಎಂದು ರಹಸ್ಯವಾಗಿ ತಿಳಿಸಿದನು. ಅಂತೆಯೇ ಒಂದು ದಿನ ಚಂದ್ರಗುಪ್ತನು ಸಭೆಯಲ್ಲಿ "ಈ ಚಾಣಕ್ಯನು ಈಗಲೀಗ ಬಹಳವಾಗಿ ಗರ್ವಿಸಿದ್ದಾನೆ. ನನ್ನನ್ನು ಯಾವ ಲಕ್ಷ್ಯಕ್ಕೂ ತಾರದೆಯೇ ಆಡಳಿತವನ್ನು ತನಗೆ ತೋರಿದಂತೆಲ್ಲ ನಡೆಯಿಸಿ ಮೆರೆಯುತ್ತಿದ್ದಾನೆ. ಆದರೂ ಬ್ರಾಹ್ಮಣನೆಂದು ನಾನಿವನನ್ನು ಮನ್ನಿಸಿದ್ದೇನೆ"

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಎಂದು ಕನಲಿ ನುಡಿದನು. ಈ ಸುದ್ದಿಯನ್ನು ಕೇಳಿ ಹಾವಾಡಿಗನ ವೇಷದಿಂದ ಕುಸುಮಪುರದಲ್ಲಿ ತಿರುಗುತ್ತಿದ್ದ ರಾಕ್ಷಸನ ಬೇಹುಗಾರನಾದ ವಿರಾಧಗುಪ್ತನು ಚಂದ್ರಗುಪ್ತನಿಗೂ, ಚಾಣಕ್ಯನಿಗೂ ವೈಮನಸ್ಯವೇ ಏರ್ಪಟ್ಟಿದೆಯೆಂದು ತಿಳಿದು ಆ ಸಂಗತಿಯನ್ನು ರಾಕ್ಷಸನಿಗೆ ತಿಳಿಸಲು ಮಲಯಕೇತುವಿನ ರಾಜಧಾನಿಗೆ ತೆರಳಿದನು.

ಅಲ್ಲಿ ಅಮಾತ್ಯರಾಕ್ಷಸನು ತನ್ನ ಪ್ರಭುಗಳಾದ ನಂದರು ಸಮೂಲ ವಾಗಿ ನಾಶವಾದುದಕ್ಕೂ ಮೌರ್ಯನ ವಧೆಗಾಗಿ ತಾನು ಮಾಡಿದ ಪ್ರಯತ್ನಗಳೆಲ್ಲ ಬೂದಿಯಲ್ಲಿ ಮಾಡಿದ ಹೋಮದಂತೆ ನಿಷ್ಫಲ ವಾದುದಕ್ಕೂ ಮೌನವಾಗಿಯೇ ಮರುಗುತ್ತ ಮುಂದಿನ ಪ್ರತೀಕಾರ ವೇನೆಂದು ಚಿಂತಿಸುತ್ತಿದ್ದನು. ಆ ಸಮಯದಲ್ಲಿಯೇ ಮಲಯಕೇತುವಿನ ಕಾಂಚುಕೀಯನಾದ ಜಾಬಾಲಿ ಅಲ್ಲಿಗೆ ಬಂದನು. ಅವನನ್ನು ಕಂಡೊಡನೆ ರಾಕ್ಷಸನಿಗೆ ಆಶ್ಚರ್ಯವಾಯಿತು. "ಏತಕ್ಕೆ ಬಂದೆ ? ಮಲಯಕೇತು ಕುಮಾರನು ಆಜ್ಞಾಪಿಸುವುದೇನು ?" ಎಂದು ಕೇಳಿದನು. ಜಾಬಾಲಿ "ಅಮಾತ್ಯ, ನೀನು ಬಹು ಕಾಲದಿಂದಲೂ ಭೂಷಣಗಳನ್ನೇ ಧರಿಸದಿರುವೆ. ಇದು ಅನುಚಿತ. ಈ ಭೂಷಣವನ್ನಾದರೂ ಧರಿಸಬೇಕು—ಎಂದು ಕುಮಾರನು ನಿನಗೆ ಹೇಳಿಕಳುಹಿಸಿದ್ದಾನೆ" ಎಂದು ಹೇಳಿ ಆಭರಣವನ್ನು ಅವನಿಗೆ ಒಪ್ಪಿಸಿದನು. ನಂದರಳಿದಂದಿನಿಂದ ಪ್ರಭುಭಕ್ತನಾದ ರಾಕ್ಷಸನು ಯಾವ ಆಭರಣವನ್ನೂ ತೊಟ್ಟಿರಲಿಲ್ಲ. ಕೇವಲ ವಿರಕ್ತನಂತೆ ಕಾಲ ಕಳೆಯುತ್ತಿದ್ದನು. ಅವನಿಗೆ ಅವೊಂದೂ ಬೇಕಿರಲೂ ಇಲ್ಲ. ಅವನಿಗೆ ಬೇಕಾಗಿದ್ದುದು ಮೌರ್ಯನನ್ನು ನಾಶಗೊಳಿಸಿ ಪ್ರಭುಗಳಿಗೆ ತೃಪ್ತಿ ಯನ್ನುಂಟುಮಾಡಬೇಕೆಂಬುದೊಂದೇ. ಆದರೂ ಪ್ರಕೃತ ಸಂದರ್ಭದಲ್ಲಿ ಮಲಯಕೇತುವನ್ನು ಸಂತೋಷಗೊಳಿಸಲೋಸುಗ ಮನಸ್ಸಿಲ್ಲದ ಮನಸ್ಸಿ ನಿಂದ ಆ ಆಭರಣವನ್ನು ಸ್ವೀಕರಿಸಿ ಧರಿಸಿದನು. ಕಾಂಚುಕೀಯನು ಪ್ರಸನ್ನಮನಸ್ಕನಾಗಿ ಪ್ರಭುಸನ್ನಿಧಾನಕ್ಕೆ ತೆರಳಿದನು.

ಇತ್ತ ಜೀರ್ಣವಿಷನೆಂದು ಹೆಸರಿಟ್ಟುಕೊಂಡು ಅಲ್ಲಲ್ಲಿ ಹಾವುಗಳ ನ್ನಾಡಿಸುತ್ತ ಸಂಚರಿಸುತ್ತಲಿದ್ದ ವಿರಾಧಗುಪ್ತನು ರಹಸ್ಯವಾಗಿ ರಾಕ್ಷಸ ನಲ್ಲಿಗೆ ಬಂದು ವೈರೋಚಕನ ಪುರಪ್ರವೇಶ ಮೊದಲ್ಗೊಂಡು ಶಕಟದಾಸನ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಶೂಲಾರೋಪಣದವರೆಗಿನ ಚಾಣಕ್ಯತಂತ್ರಗಳನ್ನೆಲ್ಲ ಅರಿಕೆಮಾಡಿದನು. "ಅಮಾತ್ಯ, ಚಾಣಕ್ಯನ ಬುದ್ಧಿಬಲದಿಂದಲೇ ಸುರಕ್ಷಿತವಾಗಿರುವ ಚಂದ್ರಗುಪ್ತನ ಶ್ರೇಯಸ್ಸನ್ನು ಪರಿಕಿಸಿದರೆ ತಮ್ಮ ಅಸಾಧಾರಣ ಪ್ರಯತ್ನ ಗಳೆಲ್ಲವೂ ವ್ಯರ್ಥಗಳೆಂದೇ ತೋರುತ್ತದೆ" ಎಂದು ಹೇಳಿ ಅನುತಾಪವನ್ನು ಸೂಚಿಸಿದನು. ರಾಕ್ಷಸನು ಇದೆಲ್ಲವನ್ನೂ ಕೇಳಿ ದುಃಖದ ಕಡಲಿನಲ್ಲಿಯೇ ಮುಳುಗಿಹೋದನು. "ಅಕ್ಕಟಾ, ನಾನು ಚಂದ್ರಗುಪ್ತನ ವಧೆಗಾಗಿ ವಿಷಕನ್ಯೆಯನ್ನು ಪ್ರಯೋಗಿಸಿದರೆ ಅಧರಿಂದ ಅರ್ಧರಾಜ್ಯಕ್ಕೆ ಭಾಗಿ ಯಾಗಿದ್ದ ಪರ್ವತೇಶ್ವರನು ಮಡಿದನು. ಆ ಚಂದ್ರಗುಪ್ತ ಹತಕನನ್ನು ಶಸ್ತ್ರದಿಂದ ಸಂಹರಿಸುವಂತೆ ದಾರುವರ್ಮನನ್ನು ಕಳುಹಿಸಿದರೆ ಅದರಿಂದ ನಿರ್ದೋಷಿಯಾದ ವೈರೋಚಕನ ವಧೆಯಾಗಿಹೋಯಿತು. ಸುರಂಗದಲ್ಲಿ ಹೊಂಚುಕಾಯುತ್ತಿದ್ದ ಘಾತುಕರು ಅಲ್ಲಿಯೇ ನಿರ್ನಾಮವಾದರು. ದಿಟ, ದಿಟ! ವಿಧಿ ನನ್ನ ಎಲ್ಲ ಕಾರ್ಯಗಳಲ್ಲಿಯೂ ವಿಮುಖವಾಗಿಯೇ ವರ್ತಿಸುತ್ತಿದೆ" ಎಂದುಕೊಂಡು ಅವನು ಬಹಳವಾಗಿ ಪ್ರಲಪಿಸಿದನು. ಅವನ ಪ್ರಲಾಪ ಹೊನಲಾಗಿ ಹರಿಯಲು ಇನ್ನೊಂದು ವಿಷಮ ವೃತ್ತಾಂತ ಅವನಿಗಾಗಿ ಕಾದಿದ್ದಿತು. ಅದೇ ನಚ್ಚಿನ ಗೆಳೆಯನಾದ ಚಂದನದಾಸನ ಬಂಧನದ ವಾರ್ತೆ. ಯಾರು ಉಳಿದಿದ್ದರೆ ತನ್ನ ಉಳಿ ವೆಂದೂ, ಸರ್ವನಾಶವಾದರೂ ಯಾರೊಬ್ಬನಿದ್ದರೆ ಸರ್ವಸ್ವಸಾಧನೆ ಯೆಂದೂ ತ್ರಿಕರಣಶುದ್ಧಿಯಾಗಿ ತಾನು ನಂಬಿದ್ದನೋ ಆ ಚಂದನ ದಾಸನು ತನಗಾಗಿ ತನ್ನ ಸಂಸಾರದ ಸಂರಕ್ಷಣೆಯನ್ನು ಮಾಡುತ್ತಿರುವುದ ಕ್ಕಾಗಿ ಕಠಿನಹೃದಯನಾದ ಚಾಣಕ್ಯಹತಕನ ದೌರ್ಜನ್ಯದಿಂದ ಬಂಧನಕ್ಕೆ ಒಳಗಾಗಿ ಹೋದನು. ವಿರಾಧಗುಪ್ತನು ಆ ವಾರ್ತೆಯನ್ನುಸುರಿ ದೊಡನೆಯೇ ರಾಕ್ಷಸನಿಗೆ ತಿಳಿವೇ ತಪ್ಪಿಹೋಯಿತು. ಆಕಾಶವೇ ಕಳಚಿ ನೆತ್ತಿಯಮೇಲೆ ಬಿದ್ದಂತಾಯಿತು. ಅವನ ಭಾಗಕ್ಕೆ ಜಗತ್ತೇ ಶೂನ್ಯವಾಗಿ ಪರಿಣಮಿಸಿತು. ಅವರ್ಣನೀಯವಾದ ಈ ಸ್ಥಿತಿಯಲ್ಲಿ ಬಹಳ ಹೊತ್ತು ಕಳೆದಮೇಲೆ ಅವನು ಮೆಲ್ಲಮೆಲ್ಲನೆ ತಿಳಿವೊಂದಿ, "ಅಹಹ ಚಂದನ ದಾಸನು ಅವಿವೇಕಮಾಡಿದನು. ಅವನು ಇಷ್ಟೊಂದು ಮುಂದುವರಿಯ ಬಾರದಾಗಿದ್ದಿತು. ನನ್ನನ್ನು ಚಾಣಕ್ಯನಿಗೊಪ್ಪಿಸಿ ಸುಖವಾಗಿ ಬಾಳ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಬೇಕಾಗಿದ್ದಿತು. ನನಗಾಗಿ ಅವನು ಅಸುನೀಗಬೇಕೆಂಬುದು ಯಾವ ಧರ್ಮ?" ಎಂದು ಅವನು ಬಹುವಾಗಿ ಬಿಸುಸುಯ್ದನು.

ವಿರಾಧಗುಪ್ತನೂ, ರಾಕ್ಷಸನೂ ಹೀಗೆ ಮಾತನಾಡುತ್ತಿದ್ದಂತೆಯೇ ಚಾರನು ಪ್ರವೇಶಿಸಿ "ಸಿದ್ಧಾರ್ಥಕನು ಶಕಟದಾಸನೊಡನೆ ತಮ್ಮನ್ನು ಕಾಣಬಂದಿದ್ದಾನೆ" ಎಂದು ಸುದ್ದಿಯನ್ನೊರೆದನು. ರಾಕ್ಷಸನಿಗೆ ಆಶ್ಚರ್ಯವಾಯಿತು. ಶೂಲಕ್ಕೇರಲಿದ್ದವನು ಬದುಕಿ ಬಂದಿದ್ದಾನೆ! ದಿಗ್ಗನೆದ್ದು ಹೋಗಿ ಅವನನ್ನು ಬರಮಾಡಿಕೊಂಡು ಅಪ್ಪಿ, "ಶಕಟದಾಸ, ಭಾಗ್ಯವಶದಿಂದ ನಿನ್ನನ್ನು ಕಂಡೆ. ನನ್ನ ಈ ನೇತ್ರಾನಂದಕ್ಕೆ ಕಾರಣ ರಾರೊ?" ಎಂದು ಕೇಳಿದನು. ಶಕಟದಾಸನು, "ಈ ಪುಣ್ಯಾತ್ಮನು ನನ್ನನ್ನು ಬಿಡಿಸಿ ಕರೆತಂದನು" ಎಂದು ಹೇಳಿ ಸಿದ್ಧಾರ್ಥಕನನ್ನು ರಾಕ್ಷಸನಿಗೆ ಪರಿಚಯಮಾಡಿಕೊಟ್ಟನು. ಶಕಟದಾಸನನ್ನುಳಿಸಿದವನೆಂದು ಸಿದ್ಧಾರ್ಥಕನ ವಿಷಯದಲ್ಲಿ ರಾಕ್ಷಸನಿಗಾದ ಸಂತೋಷ ಅಷ್ಟಿಷ್ಟಲ್ಲ. ಅವನು ಆ ಸಂತೋಷಭರದಲ್ಲಿ ಹಿಂದೆ ಕುಮಾರಮಲಯಕೇತು ತನಗೆ ಮೆಚ್ಚುಕೊಟ್ಟು ಕಳುಹಿಸಿದ್ದ ಭೂಷಣವನ್ನೇ ಕೊರಳಿನಿಂದ ತೆಗೆದು ಅವನಿಗೆ ಬಹುಮತಿಸಿದನು. ಸಿದ್ಧಾರ್ಥಕನು ಹಿಂದೆಯೇ ಚಾಣಕ್ಯನು ಸೂಚಿಸಿದ್ದಂತೆ ಆ ರತ್ನಮಾಲಿಕೆಯನ್ನು ಕೈಕೊಂಡು ಅಂತಹ ಔದಾರ್ಯವನ್ನು ತೋರಿದುದಕ್ಕಾಗಿ ರಾಕ್ಷಸನನ್ನು ಮುಕ್ತಕಂಠವಾಗಿ ಹೊಗಳಿದನು. ಆದರೆ ತಾನು ಆ ನಾಡಿಗೆ ಹೊಸಬನಾದುದರಿಂದಲೂ ತನಗೆ ಆ ಒಡವೆಯನ್ನಿಡಲು ಬೇರಾವ ಮಿತ್ರನೂ ಇಲ್ಲದಿದ್ದುದರಿಂದಲೂ ಅದನ್ನು ಅಮಾತ್ಯನೇ ಇಟ್ಟುಕೊಂಡಿರಬೇಕೆಂದು ಪ್ರಾರ್ಥಿಸಿದನು. ರಾಕ್ಷಸನು ಅಂತೆಯೇ ಆಗಲೆಂದು ಒಪ್ಪಿದನು. ಆಗ ಸಿದ್ಧಾರ್ಥಕನು ಆ ಒಡವೆಯನ್ನು ಪೆಟ್ಟಿಗೆಯಲ್ಲಿ ಭದ್ರಪಡಿಸಿ, ತನ್ನೊಡನೆ ತಂದಿದ್ದ ಅಮಾತ್ಯ ರಾಕ್ಷಸನ ಮುದ್ರಿಕೆಯನ್ನೇ ಅದಕ್ಕೊತ್ತಿದನು. ಶಕಟದಾಸನು ಅದನ್ನು ರಾಕ್ಷಸನಿಗೆ ತೋರಿದನು. ಅವನಿಗೆ ಆ ಮುದ್ರೆಯುಂಗುರ ದೊರೆತುದೆಂತೆಂದು ರಾಕ್ಷಸನಿಗೆ ಆಶ್ಚರ್ಯವಾಯಿತು. ಸಿದ್ಧಾರ್ಥಕನು ಅದು ಚಂದನದಾಸನ ಮನೆಯ ಬಳಿ ತನಗೆ ಸಿಕ್ಕಿತೆಂದು ತಿಳಿಸಲು ನಿಷ್ಕಪಟಯಾದ ಅವನು ಆ ಸುದ್ದಿಯನ್ನು ನಿಜವೆಂದೇ ನಂಬಿದನು. ಶಕಟದಾಸನು

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಆ ಮುದ್ರೆಯುಂಗುರವನ್ನು ಅಮಾತ್ಯನಿಗೇ ಒಪ್ಪಿಸಿ ಅದರ ಮೌಲ್ಯವನ್ನು ತೆಗೆದುಕೊಳ್ಳುವಂತೆ ಸಿದ್ಧಾರ್ಥಕನನ್ನು ಪ್ರೇರಿಸಿದನು. ಅವನೂ ಅದಕ್ಕೊಪ್ಪಲು, ಅಮಾತ್ಯನು, "ಇನ್ನು ಮುಂದಿನ ಕಾರ್ಯಗಳನ್ನು ನಿರ್ವಹಿಸಲು ಅದನ್ನೇ ಉಪಯೋಗಿಸತಕ್ಕುದೆಂದು ಶಕಟದಾಸನಿಗೆ ಕೊಟ್ಟನು. ಇದಾದ ಮೇಲೆ ಸಿದ್ಧಾರ್ಥಕನು, "ಅಮಾತ್ಯ, ಚಾಣಕ್ಯನಿಗೆ ವಿರೋಧಿಯಾಗಿ ನಡೆದು ಮತ್ತೆ ಕುಸುಮಪುರಕ್ಕೆ ಹಿಂತಿರುಗುವುದು ಅಸಾಧ್ಯ. ನನ್ನನ್ನು ಸೇವಕನನ್ನಾಗಿ ಸ್ವೀಕರಿಸಿ ಸಲಹಬೇಕು" ಎಂದು ಪ್ರಾರ್ಥಿಸಿದನು. ಅಮಾತ್ಯರಾಕ್ಷಸನು ಮುಂದಾಲೋಚನೆ ಮಾಡದೆ ಅದಕ್ಕೂ ಒಪ್ಪಿದನು.

ಶಕಟದಾಸನೂ, ಸಿದ್ಧಾರ್ಥಕನೂ ತೆರಳಿದ ತರುವಾಯ ವಿರಾಧಗುಪ್ತನು ಕುಸುಮಪುರದ ಸುದ್ದಿಯನ್ನು ಮುಂದುವರಿಸಿದನು. ಚಾಣಕ್ಯನು ತಾನೇ ರಾಜ್ಯವನ್ನು ದೊರಕಿಸಿಕೊಟ್ಟವನೆಂದು ಗರ್ವಿಸಿ ನಿರಂಕುಶವಾಗಿ ನಡೆಯುತ್ತಿರುವುದರಿಂದ ಚಂದ್ರಗುಪ್ತನಿಗೂ ಅವನಿಗೂ ವೈಮನಸ್ಯವುಂಟಾಗಿರುವ ವಿಷಯವನ್ನು ಅವನು ತಿಳಿಸಿದನು. ಈ ಸುದ್ದಿಯನ್ನು ಕೇಳಿದೊಡನೆಯೇ ಅಮಾತ್ಯರಾಕ್ಷಸನಿಗೆ ಸಂತೋಷದೊಡನೆ ಅದೊಂದು ಬಗೆಯ ಸ್ಫೂರ್ತಿಯೂ ಉಂಟಾಯಿತು. "ವಿರಾಧಗುಪ್ತ, ಹೀಗೆ ಚಾಣಕ್ಯ ಚಂದ್ರಗುಪ್ತರಲ್ಲಿ ಅಂಕುರಿಸಿರುವ ವೈಮನಸ್ಯ ವರ್ಧಿಸುತ್ತ ಹೋಗಬೇಕು. ಇದಕ್ಕಾಗಿ ನೀನು ಈ ವೇಷದಿಂದಲೇ ಮತ್ತೆ ಕುಸುಮಪುರಕ್ಕೆ ಹೋಗು. ಆಸ್ಥಾನದಲ್ಲಿ ನನಗೆ ಆಪ್ತನಾದ ಸ್ತನಕಳಶನೆಂಬ ವೈತಾಳಿಕನಿದ್ದಾನೆ. ಅವನನ್ನು ಕಂಡು ಚಾಣಕ್ಯನು ಚಂದ್ರಗುಪ್ತನ ಆಜ್ಞೆಗಳನ್ನು ಭಂಗಗೊಳಿಸಿದ ಪ್ರಸಂಗಗಳಲ್ಲೆಲ್ಲ ಉತ್ತೇಜಕ ಶ್ಲೋಕಗಳನ್ನು ಹಾಡಿ ವೈಮನಸ್ಯವನ್ನು ಹೆಚ್ಚಿಸತಕ್ಕದ್ದು—ಎಂದು ನಾನು ಹೇಳಿದುದಾಗಿ ಅವನಿಗೆ ತಿಳಿಸು. ರಹಸ್ಯವಾದ ಕಾರ್ಯವೇನಾದರೂ ಇದ್ದರೆ ಅದನ್ನು ಕರಭಕನ ಮೂಲಕ ಹೇಳಿಕಳುಹಿಸತಕ್ಕದ್ದೆಂದೂ ತಿಳಿಸು" ಎಂದನು. ವಿರಾಧಗುಪ್ತನು ಅಂತೆಯೆ ಕಾರ್ಯಸಾಧನೆಗಾಗಿ ಕುಸುಮಪುರಕ್ಕೆ ಹೊರಟುಹೋದನು.

ಇತ್ತ, ವಿರಾಧಗುಪ್ತನು ಹೊರಟ ತರುವಾಯ ಚಾಣಕ್ಯನ ಆಜ್ಞೆಯಂತೆ ವರ್ತಕರ ವೇಷವನ್ನು ಧರಿಸಿದ್ದ ಬ್ರಾಹ್ಮಣರು ತಾವು ತಂದಿದ್ದ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಆಭರಣತ್ರಯವನ್ನೂ ಅಮಾತ್ಯನಿಗೆ ಮಾರಿದರು. ಅದನ್ನು ಶಕಟದಾಸನೇ ಕೊಂಡಿಟ್ಟನು. ಅದು ಪರ್ವತೇಶ್ವರನ ಆಭರಣಗಳೆಂಬ ವಿಷಯವೇ ರಾಕ್ಷಸನಿಗೆ ಅರಿಯದೆ ಹೋಯಿತು. ಈ ಪ್ರಸಂಗವಾದ ಕೆಲ ದಿನಗಳ ಮೇಲೆ ಅವನು ಚಂದ್ರಗುಪ್ತಚಾಣಕ್ಯರ ಕಪಟಕಲಹವನ್ನೇ ನೆಚ್ಚಿ ಕುಸುಮಪುರದ ಮೇಲೆ ದಂಡೆತ್ತಿಹೋಗಲು ಸಕಲಸನ್ನಾಹಗಳನ್ನೂ ಮಾಡತೊಡಗಿದನು. ಆ ವಿರೋಧ ದಿಟವಾಗಿಯೂ ಬೆಳೆಯುತ್ತಿದೆಯೇ ಎಂಬ ಸಂಗತಿಯನ್ನು ತಿಳಿಯಲು ನಡುನಡುವೆ ಬೇಹುಗಾರರನ್ನು ಕುಸುಮಪುರಕ್ಕೆ ಅಟ್ಟುತ್ತಿದ್ದನು. ಅಲ್ಲಿ ಚಾಣಕ್ಯನೂ ಸಹ ಈ ವಿಚಾರ ವನ್ನರಿತೂ ಅರಿಯದಂತೆ ನಟಿಸಿ ಚಂದ್ರಗುಪ್ತನಲ್ಲಿ ಇನ್ನೂ ಹೆಚ್ಚಾಗಿ ಕಪಟ ಕೋಪವನ್ನು ವಿಜೃಂಭಿಸುತ್ತಿದ್ದನು.

ಚಾಣಕ್ಯನು ಇದ್ದಕ್ಕಿದಂತೆಯೇ ತನ್ನ ತಂತ್ರ ಪರಮಾವಧಿಗೆ ಮುಟ್ಟುವಂತೆ ಒಂದು ಉಪಾಯವನ್ನು ಹೂಡಿದನು. ಅವನ ಸೂಚನೆ ಯಂತೆ ಚಂದ್ರಗುಪ್ತನು ಪ್ರಜೆಗಳ ಮನೋರಂಜನೆಗಾಗಿ ವರ್ಷ ವರ್ಷವೂ ನಡೆಯುತ್ತಿದ್ದ ಕೌಮುದೀಮಹೋತ್ಸವವನ್ನು ವಿಜೃಂಭಣೆಯಿಂದ ನಡಸತಕ್ಕುದೆಂದೂ, ರಾಜಪ್ರಾಸಾದ (ಸುಗಾಂಗ) ವನ್ನು ಸಿಂಗರಿಸ ತಕ್ಕುದೆಂದೂ ಆಜ್ಞಾಪಿಸಿದನು. ಎತ್ತೆತ್ತಲೂ ಮಹೋತ್ಸವಕ್ಕಾಗಿ ಏರ್ಪಾಡುಗಳು ನಡೆಯತೊಡಗಿದುವು. ರಾಜಪ್ರಾಸಾದವೂ ಅಂದಗೊಳ್ಳ ಲಾರಂಭಿಸಿತು. ಚಾಣಕ್ಯನು ಅದನ್ನು ಕಂಡು ತನ್ನ ಅನುಮತಿಯಿಲ್ಲದೆ ಕೌಮುದೀಮಹೋತ್ಸವ ನಡೆಯತಕ್ಕುದಲ್ಲವೆಂದು ನಿಷೇಧಿಸಿದನು.

ಚಂದ್ರಗುಪ್ತನಿಗೆ ಈ ಸುದ್ದಿ ಮುಟ್ಟಿತು. ಒಡನೆಯೇ ಅವನಿಗೆ ಮುನಿಸೂ ಬಂದಿತು. ಚಾಣಕ್ಯನನ್ನು ಅವಸರವಾಗಿ ಕರೆಯಿಸಿದನು. ಚಾಣಕ್ಯನು ಬಿಜಮಾಡಿದಾಗ ಚಂದ್ರಗುಪ್ತನು ಸುಗಾಂಗ ಪ್ರಾಸಾದದಲ್ಲಿ ಸಿಂಹಾಸನಾಸೀನನಾಗಿದ್ದನು. ಚಾಣಕ್ಯನು ಬಂದೊಡನೆಯೇ ಅವನು ನಮ್ರನಾಗಿ ಸಿಂಹಾಸನದಿಂದಿಳಿದು ಅವನ ಪಾದಕ್ಕೆರಗಿ ಆಶೀರ್ವಾದವನ್ನು ಕೈಕೊಂಡನು. ಚಾಣಕ್ಯನು ಆಸನವನ್ನು ಪರಿಗ್ರಹಿಸಿದ ತರುವಾಯ, "ವೃಷಲ, ನನ್ನನ್ನು ಕರೆಯಿಸಿದ್ದೇಕೆ ?" ಎಂದು ಕೇಳಿದನು.

ಚಂದ್ರಗುಪ್ತ :—ಆರ್ಯನ ದರ್ಶನದಿಂದ ಅನುಗೃಹೀತನಾಗುವುದಕ್ಕೆ.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಚಾಣಕ್ಯ :—(ನಸುನಗೆಬೀರಿ) ವೃಷಲ, ಈ ವಿನಯ ಸಾಕು. ಪ್ರಭುಗಳು ಪ್ರಯೋಜನವಿಲ್ಲದೆ ಅಧಿಕಾರಿಗಳನ್ನು ಕರೆಯಿಸುವುದಿಲ್ಲ. ಆದುದರಿಂದ ಪ್ರಯೋಜನವನ್ನು ಹೇಳು.

ಚಂದ್ರ :—ಆರ್ಯ, ಕೌಮುದೀಮಹೋತ್ಸವದ ಪ್ರತಿಷೇಧಕ್ಕೆ ತಾವು ಕಾಣುವ ಫಲವೇನು ?

ಚಾಣಕ್ಯ :—(ನಸುನಕ್ಕು) ಓಹೋ, ಹಾಗಾದರೆ ಹಳಿಯುವುದಕ್ಕೆ ನಮ್ಮನ್ನು ಕರೆಯಿಸಿದೆಯೊ ?

ಚಂದ್ರ :—ಹಳಿಯುವುದಕ್ಕಲ್ಲ ಆರ್ಯ, ಅರಿಕೆ ಮಾಡುವುದಕ್ಕೆ.

ಚಾಣಕ್ಯ :—ವೃಷಲ, ಹಾಗಿದ್ದಲ್ಲಿ ವಿಜ್ಞಾಪನೀಯರಾದ ಶಿಷ್ಯರು ಗುರುಗಳ ಅಭಿಪ್ರಾಯವನ್ನು ಅನುಸರಿಸತಕ್ಕುದು.

ಚಂದ್ರ :—ಆರ್ಯ, ಸಂದೇಹವೇನು ? ಆರ್ಯನ ಅಭಿರುಚಿ ಯಾವಾಗಲೂ ನಿಷ್ಪ್ರಯೋಜಕವಾಗಿ ಪ್ರವರ್ತಿಸುವುದಿಲ್ಲವಾದ್ದರಿಂದ ನನ್ನ ಪ್ರಶ್ನೆಗೆ ಅವಕಾಶವುಂಟು.

ಚಾಣಕ್ಯ :—ವೃಷಲ, ಚೆನ್ನಾಗಿ ತಿಳಿದಿರುವೆ. ಚಾಣಕ್ಯನು ಪ್ರಯೋಜನವಿಲ್ಲದೆ ಸ್ವಪ್ನದಲ್ಲಿಯೂ ಹೊರಳುವುದಿಲ್ಲವೆಂದೊ ?

ಚಂದ್ರ :—ಆರ್ಯ, ಆದುದರಿಂದಲೇ ಪ್ರಯೋಜನವನ್ನು ಕೇಳುವ ಆಶೆ ಪ್ರಶ್ನೆಯನ್ನು ಪ್ರೇರಿಸುತ್ತಿದೆ.

ಚಾಣಕ್ಯ :—ಕೇಳು ವೃಷಲ, ಈ ವಿಷಯದಲ್ಲಿ ಅರ್ಥಶಾಸ್ತ್ರಕಾರರು ಮೂರು ಬಗೆಯ ಸಿದ್ಧಿಗಳನ್ನು ವರ್ಣಿಸುತ್ತಾರೆ:—ರಾಜಾಯತ್ತ, ಸಚಿವಾಯತ್ತ, ಉಭಯಾಯತ್ತ. ಸಚಿವಾಯತ್ತಸಿದ್ಧಿಯಾದ ನೀನು ಕಾರಣವನ್ನು ಹುಡುಕುವುದರಿಂದಾಗುವ ಫಲವೇನು ? ಅದರಿಂದ ಸುಮ್ಮನೆ ಮಾತು ಮನಸ್ಸುಗಳಿಗೆ ಖೇದವೇ. ನಾವು ಅದರಲ್ಲಿ ನಿಯುಕ್ತರಾಗಿದ್ದೇವೆ. ಅದನ್ನೆಲ್ಲ ನಾವೇ ತಿಳಿದುಕೊಳ್ಳುತ್ತೇವೆ.

ಈ ಮಾತು ಚಾಣಕ್ಯನ ಬಾಯಿಂದ ಬಂದೊಡನೆಯೆ ಒಳಗೆ ರಾಕ್ಷಸನ ಒಳಸಂಚಿಗೆ ಸೇರಿದ್ದ ವೈತಾಳಿಕನು ಪ್ರೋತ್ಸಾಹಕವಾದ ಹಾಡುಗಳನ್ನು ಹಾಡಿ ಅಸಮಾಧಾನಗೊಂಡಿದ್ದ ಚಂದ್ರಗುಪ್ತನ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಮುನಿಸನ್ನು ಮತ್ತಷ್ಟು ಕೆರಳಿಸಿದನು. ಚಂದ್ರಗುಪ್ತನು ಆ ವೈತಾಳಿಕನಿಗೆ ಸಾವಿರಹೊನ್ನನ್ನು ಮೆಚ್ಚುಕೊಡತಕ್ಕದ್ದೆಂದು ಕಾಂಚುಕೀಯ ವೈಹೀನರಿಗೆ ಅಪ್ಪಣೆಮಾಡಿದನು. ಒಡನೆಯೇ ಚಾಣಕ್ಯನು ಅವನನ್ನು ತಡೆದು, "ಚಂದ್ರಗುಪ್ತ, ಅಸ್ಥಾನದಲ್ಲಿ ಇಷ್ಟು ಧನವ್ಯಯವೇಕೆ?" ಎಂದು ಕೇಳಿದನು. "ಆರ್ಯನು ಪ್ರತಿಯೊಂದು ವಿಷಯದಲ್ಲಿಯೂ ಹೀಗೆ ಅಡ್ಡಿಪಡಿಸುತ್ತಿದ್ದರೆ ರಾಜ್ಯವು ನನಗೆ ಬಂಧನದಂತೆಯೇ, ರಾಜ್ಯದಂತಲ್ಲ" ಎಂದು ಚಂದ್ರಗುಪ್ತನು ಕೆರಳಿ ನುಡಿದನು. ಚಾಣಕ್ಯನು, "ವೃಷಲ, ಸ್ವಯಂಬುದ್ಧಿಶಾಲಿಗಳಲ್ಲದ ಅರಸರಿಗೆ ಇಂಥ ದೋಷಗಳು ಉಂಟೇ ಉಂಟು. ಇದನ್ನೆಲ್ಲ ನೀನು ಸಹಿಸಿಕೊಳ್ಳದಿದ್ದರೆ ನೀನೇ ರಾಜ್ಯವನ್ನಾಳಿಕೊ" ಎಂದನು. ಚಂದ್ರಗುಪ್ತನು ನೆಪಸಿಕ್ಕಿದವನಂತೆ ವಿಜೃಂಭಿಸಿ "ಇದೊ ನಮ್ಮ ಕಾರ್ಯದಲ್ಲಿ ನಾವು ತೊಡಗುವೆವು" ಎಂದು ಮರುನುಡಿದನು. ಚಾಣಕ್ಯನು "ತುಂಬ ಸಂತೋಷ. ನಾವೂ ನಮ್ಮ ಕೆಲಸದಲ್ಲಿ ತೊಡಗುತ್ತೇವೆ" ಎಂದನು. ಚಂದ್ರಗುಪ್ತನು "ಹಾಗಾದರೆ ಈಗ ನಾನು ಕೇಳುತ್ತೇನೆ: ಕೌಮುದೀ ಮಹೋತ್ಸವಪ್ರತಿಷೇಧಕ್ಕೆ ಪ್ರಯೋಜನವೇನು?" ಎಂದು ಪ್ರಶ್ನಿಸಿದನು. ಚಾಣಕ್ಯನು "ವೃಷಲ, ನಾನೂ ಕೇಳಬಯಸುತ್ತೇನೆ: ಕೌಮುದೀ ಮಹೋತ್ಸವವನ್ನು ನಡೆಯಿಸುವುದರಿಂದ ಏನು ಪ್ರಯೋಜನ" ಎಂದನು. ಚಂದ್ರಗುಪ್ತನು ಈ ಮಾತಿನಿಂದ ಮತ್ತಷ್ಟು ಕೆರಳಿದವನಂತೆ ನಟಿಸಿ, "ಹಾಗಾದರೆ ನನ್ನ ಆಜ್ಞೆಗೆ ಭಂಗತರುವುದೇ ಇದಕ್ಕೆ ಕಾರಣವೊ?" ಎಂದು ಪ್ರಶ್ನಿಸಿದನು. ಚಾಣಕ್ಯನು ಅದೇ ಧ್ವನಿಯಿಂದ "ಹೌದು ವೃಷಲ! ನಿನ್ನ ಆಜ್ಞೆಗೆ ಭಂಗತರುವುದೇ ಪ್ರಥಮ ಪ್ರಯೋಜನ. ಏಕೆನ್ನುವೆಯೊ? ನಿನ್ನ ಪ್ರಭುತ್ವ ಅಚ್ಚಳಿಯದಿರುವುದೇ ಅದನ್ನು ಸೂಚಿಸುತ್ತಿದೆಯಲ್ಲವೆ? ಮತ್ತೊಂದು ಪ್ರಯೋಜನವನ್ನು ಕೇಳಬಯಸುವೆಯಾದರೆ ಅದನ್ನೂ ಹೇಳುತ್ತೇನೆ" ಎಂದು ಹೇಳಿ ಚಾಣಕ್ಯನು ಮಾತನ್ನು ಮುಂದುವರಿಸಿದನು: "ಭದ್ರಭಟ ಪುರುಷದತ್ತರೆಂಬ ನಮ್ಮ ಕಡೆಯ ಗಜಾಧ್ಯಕ್ಷ ಅಶ್ವಾಧ್ಯಕ್ಷರಿಬ್ಬರೂ ಸ್ತ್ರೀಮದ್ಯಮೃಗಯಾಶೀಲರಾದುದರಿಂದ ಆ ಅಧಿಕಾರಗಳಿಗೆ ಅನರ್ಹರೆಂದು ನಾನು ಅವರನ್ನು ವಿಸರ್ಜಿಸಿದೆನು.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಅಷ್ಟರಿಂದಲೆ ಅವರು ಹುರುಡಿಸಿ ಮಲಯಕೇತುವನ್ನಾಶ್ರಯಿಸಿ ಅದೇ ಅಧಿಕಾರಗಳಲ್ಲಿಯೇ ತೊಡಗಿ ನಮ್ಮ ಮೇಲೆ ಸೆಣಸುತ್ತಿದ್ದಾರೆ. ಡಿಂಗಿರಾತ ಬಲಗುಪ್ತರು–ಇವರು ನೀನು ಕೊಡುವ ಸಂಬಳ ಬಹಳ ಕಡಮೆಯೆಂದು ಹೆಚ್ಚಿನ ಸಂಬಳಗಳಿಗೆ ಕೈಯೊಡ್ಡಿ ಅದೇ ಮಲಯಕೇತುವನ್ನೇ ನಮ್ಮಿ ನಿಂತಿದ್ದಾರೆ. ಇದೆಲ್ಲಾ ಹಾಗಿರಲಿ. ನೀನೇ ಶ್ರದ್ಧೆವಹಿಸಿ ಮುಂದಕ್ಕೆ ತಂದ ಕುಮಾರಸೇವಕನಾದ ರಾಜಸೇನ ತನ್ನಲ್ಲಿರುವ ಅಪಾರವಾದ ಸಂಪತ್ತು ಕಳೆದುಹೋದೀತೆಂದು ಶಂಕಿಸಿ ಇದ್ದಕ್ಕಿದ್ದಂತೆಯೇ ಮಲಯಕೇತುವಿನ ರಾಜ್ಯಕ್ಕೆ ಓಡಿಹೋಗಿದ್ದಾನೆ. ಇನ್ನು ಭಾಗುರಾಯಣ: ಅವನು ಚಾಣಕ್ಯನು ನಿನ್ನ ತಂದೆಯನ್ನು ಕೊಂದನು ಎಂದು ಮಲಯಕೇತುವಿಗೆ ದೂರುಹೇಳಿ ಅವನ ವಿಶ್ವಾಸವನ್ನು ಸಂಪಾದಿಸಿ ಅವನನ್ನೇ ಗುಟ್ಟಾಗಿ ಓಲಯ್ಸುತ್ತಿದ್ದಾನೆ. ಅವನು ತನ್ನ ಪ್ರಾಣಗಳನ್ನು ಉಳಿಸಿದವನೆಂದು ಮಲಯಕೇತುವು ಅವನನ್ನು ವಿಶ್ವಾಸಗೌರವಗಳಿಂದ ಕಾಣುತ್ತಿದ್ದಾನೆ. ಲೋಹಿತಾಕ್ಷವಿಜಯವರ್ಮರು ನಿನ್ನ ಸಂಪತ್ತನ್ನು ಸಹಿಸದೆ ಮಲಯಕೇತುವನ್ನಾಶ್ರಯಿಸಿದ್ದಾರೆ. ಹೀಗೆ ಎಲ್ಲ ಬಗೆಯಲ್ಲೂ ನಿನಗೆ ವಿರೋಧವೇ ಕಂಡುಬರುತ್ತಿದೆ. ಆದುದರಿಂದ ಇದು ಯುದ್ಧಕಾಲ; ಉತ್ಸವಕಾಲವಲ್ಲ. ಆದುದರಿಂದಲೇ ಈ ವೈಭವದ ಕೌಮುದೀ ಮಹೋತ್ಸವವನ್ನು ನಾನು ಬೇಡವೆಂದು ನಿಲ್ಲಿಸಿದ್ದು.”

ಚಂದ್ರಗುಪ್ತನು ಎಲ್ಲವನ್ನೂ ಸಾವಧಾನದಿಂದ ಕೇಳಿ ಮತ್ತೂ ಅಸಹನೆಯನ್ನೇ ತೋರುತ್ತ, “ಹಾಗಾದರೆ ಮಲಯಕೇತುವು ಓಡಿಹೋಗುತ್ತಿದ್ದರೂ ಆರ್ಯನು ಉಪೇಕ್ಷಿಸಿದ್ದೇಕೆ?” ಎಂದನು. ಚಾಣಕ್ಯನು “ವೃಷಲ, ಉಪೇಕ್ಷೆಗೆ ಎರಡು ಕಾರಣಗಳು. ಅವನು ಇಲ್ಲಿಯೇ ಇದ್ದರೆ ಮಾತುಕೊಟ್ಟದ್ದಂತೆ ಪರ್ವತೇಶ್ವರನಿಗೆ ಸಲ್ಲಬೇಕಾಗಿದ್ದ ಅರ್ಧ ರಾಜ್ಯವನ್ನು ಅವನಿಗೆ ಕೊಡಬೇಕಾಗಿದ್ದಿತು. ಇದು ಮೊದಲನೆಯ ಕಾರಣ. ಎರಡನೆಯದಾಗಿ, ಅವನನ್ನು ನಿಗ್ರಹಿಸಿದ್ದರೆ ನಮಗೆ ಕೃತಘ್ನತೆಯ ಪಟ್ಟ. ಎರಡೂ ಉಚಿತವಲ್ಲವೆಂದೇ ಉಪೇಕ್ಷಿಸಿದ್ದು” ಎಂದು ಸಮಾಧಾನ ಹೇಳಿದನು. ಚಂದ್ರಗುಪ್ತನು ಆ ಮಾತನ್ನು ಒಪ್ಪಿಯೂ ಒಪ್ಪದಂತೆ ತೋರಿಸಿಕೊಳ್ಳುತ್ತ, “ಓಹೋ, ಇದು ಹೀಗೆಯೋ? ಸರಿ;

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ರಾಕ್ಷಸನು ಇಲ್ಲಿಯೇ ಇದ್ದರೂ ಅವನನ್ನೇಕೆ ಉಪೇಕ್ಷಿಸಿದ್ದು? ಎಂದು ಮತ್ತೆ ಪ್ರಶ್ನಿಸಿದನು. ಚಾಣಕ್ಯನು, "ನಂದಾನುರಕ್ತನಾದ ಪ್ರಜೆಗಳ ಪ್ರೀತಿವಿಶ್ವಾಸಗಳನ್ನು ಸಂಪಾದಿಸಿ ಮಹೋನ್ನತನಾಗಿರುವವನು ರಾಕ್ಷಸ. ಮಹಾಪ್ರಜ್ಞಾವಂತ. ಸಹಾಯ ಸಂಪತ್ತಿಯೂ ಅವನಿಗೆ ಬೇಕಾದಷ್ಟು ಉಂಟು. ಇಲ್ಲಿಯೇ ಇದ್ದರೆ ಅಂತಃಕಲಹಗಳನ್ನು ತಂದೊಡ್ಡಿ ನಮಗೆ ಕಿರುಕುಳ ಕೊಡುತ್ತಾನೆ. ಆಚೆಯಿದ್ದು ಎಡರುಗಳನ್ನು ಒಡ್ಡಿದರೂ ನಿಗ್ರಹಿಸಬಹುದೆಂದು ಉಪೇಕ್ಷಿಸಿದ್ದಾಯಿತು ಎಂದು ತಿಳಿಸಿದನು." "ಬಲಪ್ರಯೋಗದಿಂದ ಅವನನ್ನು ಹಿಡಿದುಹಾಕಲಿಲ್ಲವೇಕೆ?" ಎಂದು ಚಂದ್ರಗುಪ್ತನು ಅಧಿಕಪ್ರಶ್ನೆಯನ್ನೇ ಕೇಳಿದನು. "ವೃಷಲಾ, ಅವನು ರಾಕ್ಷಸನಲ್ಲವೆ? ಬಲಪ್ರಯೋಗದಿಂದ ಹಿಡಿದಿದ್ದರೆ ನಿನ್ನ ಸೇನೆಗಳಲ್ಲಿ ಬಹು ಭಾಗವನ್ನು ನಾಶಗೊಳಿಸುತ್ತಿದ್ದನು. ಇಲ್ಲವೆ ತಾನೇ ಅಳಿಯುತ್ತಿದ್ದನು. ಎರಡೂ ನಮಗೆ ಶ್ರೇಯಸ್ಕರವಲ್ಲ," ಎಂದು ಚಾಣಕ್ಯನು ಸೂಚಿಸಿದನ್ನು

ಚಾಣಕ್ಯನು ಹೀಗೆ ರಾಜಕಾರ್ಯಗಳನ್ನು ನಡೆಯಿಸಿದುದರ ಪರಿಯನ್ನು ಸಮಗ್ರವಾಗಿ ತಿಳಿಸಿದರೂ ಚಂದ್ರಗುಪ್ತನು ಅದನ್ನು ಮನಸ್ಸಿಗೇ ತಂದುಕೊಳ್ಳದವನಂತೆ, "ಆರ್ಯನ ಬುದ್ಧಿಯನ್ನು ಅತಿಕ್ರಮಿಸಲು ನಮಗೆ ಶಕ್ಯವಲ್ಲ, ಎಷ್ಟೇ ಆದರೂ ಈ ವಿಷಯದಲ್ಲಿ ಅಮಾತ್ಯ ರಾಕ್ಷಸನೇ ಅತ್ಯಂತ ಸ್ತೋತ್ರಾರ್ಹನು" ಎಂದು ಕೊಂಕುಮಾತಗಳನ್ನಾಡಿದನು. ಚಾಣಕ್ಯನಿಗೆ ಮುನಿಸು ಮಿತಿಮೀರಿತು. "ನೀನಲ್ಲವೆಂದು ವಾಕ್ಯ ಶೇಷವೊ? ಎಲಾ ವೃಷಲಾ! ಅವನು ಮಾಡಿದ್ದೇನು?" ಎಂದು ಸಿಡಿದು ನುಡಿದನು. "ಅವನೇ? ಮಹಾತ್ಮ. ನಂದರಾಜ್ಯ ನಮ್ಮ ಕೈ ಸೇರಿದರೂ ಅಂಜದೆ ತನಗೆ ಇಷ್ಟಬಂದಷ್ಟು ಕಾಲ ಇಲ್ಲಿಯೇ ಇದ್ದು ಹೆಮ್ಮೆಯಿಂದ ನಮ್ಮ ಮೇಲೆ ಹಗೆಯನ್ನು ಸಾಧಿಸಿದನು" ಎಂದು ಚಂದ್ರಗುಪ್ತನು ಚಾಣಕ್ಯನಿಗೆ ಮತ್ತಷ್ಟು ಕೋಪಬರುವಂತೆ ಮಾತನಾಡಿದನು. ಚಾಣಕ್ಯನು ಆ ಮಾತಿಗೆ ಗಹಗಹಿಸಿ ನಕ್ಕು, "ಓಹೋ! ರಾಕ್ಷಸನು ಇದನ್ನು ಮಾಡಿದನೊ? ಈ ಚಾಣಕ್ಯನು ನಂದಾಧಮರನ್ನು ತಳ್ಳಿ ನಿನ್ನನ್ನು ಸಿಂಹಾಸನದಮೇಲೆ ಕುಳ್ಳಿರಿಸಿದಂತೆ ರಾಕ್ಷಸನು, ನಿನ್ನನ್ನೂ ಅಂತೆಯೇ.... ಮಲಯಕೇತುವನ್ನು ಸಿಂಹಾಸನಾಧಿಪನನ್ನಾಗಿಸಿದನು

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಎಂದು ನಾನು ತಿಳಿದೆ" ಎಂದು ಚುಚ್ಚುನುಡಿಯಾಡಿದನು. ಚಾಣಕ್ಯನು ಇನ್ನೂ ಮುಂದುವರಿದು, "ಅಯ್ಯೋ ಮತ್ಸರಿಯೇ, ತೊಂಬತ್ತೊಂಬತ್ತು ಕೋಟಿ ದ್ರವ್ಯಕ್ಕೆ ಅಧೀಶ್ವರರಾಗಿದ್ದು ರೂಢಮೂಲವಾದ ಪ್ರಭುತ್ವವನ್ನು ನೆರೆಯುತ್ತಿದ್ದ ಒಂಬತ್ತು ಮಂದಿ ನಂದರನ್ನು ಸಾಮೂಹಿಕವಾಗಿ ಆ ರಾಕ್ಷಸನ ಕಣ್ಣೆದುರಿಗೇ ಪಶುಗಳನ್ನೆಂತೋ ಅಂತು ತೊಡೆದುಹಾಕಿದವ ರಾರು ?" ಎಂದು ಅಬ್ಬರಿಸಿ ನುಡಿದನು. ಚಂದ್ರಗುಪ್ತನು ಆ ಮಾತನ್ನೇ ಲಕ್ಷ್ಯಕ್ಕೆ ತಂದುಕೊಳ್ಳದೆ, "ಅಯ್ಯಾ! ಇದನ್ನು ಮಾಡಿದವನೇ ಬೇರೆ. ನಂದಕುಲ ವಿದ್ವೇಷಿಯಾದ ದೈವ" ಎಂದನು. ಚಾಣಕ್ಯನಿಗೆ ರೇಗಿತು. "ದೈವವನ್ನು ನೆಮ್ಮುವವರು ಗಾಂಪರು" ಎಂದನು. ಚಂದ್ರಗುಪ್ತನು ಮತ್ತೂ ಮುಂದುವರಿದು, "ಗಾಂಪರಲ್ಲದವರು ತಮ್ಮನ್ನು ತಾವೇ ಹೊಗಳಿಕೊಳ್ಳುವುದಿಲ್ಲ" ಎಂದನು. ಈ ಮಾತನ್ನು ಕೇಳಿದೊಡನೆಯೆ ಚಾಣಕ್ಯನು ಉಗ್ರವಾಗಿ ಕೆರಳಿದಂತೆ ನಟಿಸಿ, "ವೃಷಲಾ, ವೃಷಲಾ! ನನ್ನನ್ನು ಭೃತ್ಯನೆಂದು ಭಾವಿಸಿ ನನ್ನಮೇಲೇರಲು ಬರುವೆಯೊ ?" ಎಂದು ನುಡಿದು, ಕಟ್ಟಿದ್ದ ಮುಡಿಯನ್ನು ಸಡಲಿಸಲು ಹವಣಿಸುತ್ತ ಹೇಗೆ ಹೇಗೆಯೋ ಕೋಪವನ್ನು ನುಂಗಿಕೊಂಡು, "ವೃಷಲ, ಈ ಉತ್ತರಪ್ರತ್ಯು ತ್ತರಗಳು ಇನ್ನು ಸಾಕು. ರಾಕ್ಷಸನೇ ಶ್ರೇಷ್ಠನೆಂದು ನೀನು ತಿಳಿಯುವೆ ಯಾದರೆ ಅವನಿಗೇ ಈ ಶಸ್ತ್ರವನ್ನು ಕೊಟ್ಟುಕೊ" ಎಂದು ಗಜರಿ ಶಸ್ತ್ರ ವನ್ನತ್ತ ಎಸೆದು ಹೊರಟುಹೋದನು.

ಅತ್ತ ಚಾಣಕ್ಯನು ಹೊರಟುಹೋದ ಒಡನೆಯೆ ಇತ್ತ ಚಂದ್ರ ಗುಪ್ತನು ಅಂದಿನಿಂದ ಚಾಣಕ್ಯನನ್ನು ಲೆಕ್ಕಿಸದೆ ತಾನೇ ಸ್ವತಂತ್ರವಾಗಿ ರಾಜ್ಯವಾಳುವನೆಂದು ನಗರದಲ್ಲೆಲ್ಲಾ ಡಂಗುರ ಹೊಡೆಯಿಸತಕ್ಕುದೆಂದು ಕಾಂಚುಕೀಯನಿಗೆ ಅಪ್ಪಣೆಮಾಡಿದನು. ಕಾಂಚುಕೀಯನಾದ ವೈಹೀನ ರಿಗೆ ಅಮಿತಾನಂದವಾಯಿತು. ಅವನು, "ಭಾಗ್ಯವಶದಿಂದ ಮಹಾ ಸ್ವಾಮಿಯವರು ಇಂದಿಗೆ ಮಹಾಸ್ವಾಮಿಯವರಾದರು" ಎಂದು ತನ್ನ ಆನಂದವನ್ನು ಸೂಚಿಸಿದನು. ಒಳಗೊಳಗೇ ರಾಕ್ಷಸನ ಕಡೆಯವರೆಲ್ಲ ರಿಗೂ ಹೊಸ ಉತ್ಸಾಹ ಉದಿಸಿತು. ಚಾಣಕ್ಯನನ್ನುಳಿದ ಚಂದ್ರಗುಪ್ತ ನನ್ನು ಬಹುಸುಲಭವಾಗಿಯೇ ನಿಗ್ರಹಿಸಬಹುದೆಂದು ಅವರ ಎಣಿಕೆ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಯಾಯಿತು. ಚಂದ್ರಗುಪ್ತನಾದರೋ ಆ ರೀತಿ ಅಪ್ಪಣೆಮಾಡಿದನಾದರೂ ಅವನ ಮನಸ್ಸೇ ಒಂದು ಬಗೆಯಾಯಿತು. ಕನಸುಮನಸುಗಳಲ್ಲಿಯೂ ಆರ್ಯಚಾಣಕ್ಯನಿಗೆ ವಿರುದ್ಧವನ್ನು ಬಗೆಯದ ಅವನು, "ಆರ್ಯನ ಅಪ್ಪಣೆಯಿಂದಲೇ ಆತನ ವಿಷಯದಲ್ಲಿ ಗೌರವವನ್ನು ಮೀರಿದೆ. ಆದರೂ ನನ್ನ ಬುದ್ಧಿಯೇ ಭೂಮಿಗಿಳಿದಂತಾಗಿದೆ. ಇನ್ನು ದಿಟವಾಗಿಯೂ ಗುರುಗಳನ್ನು ಅಲ್ಲಗಳೆಯುವವರ ಹೃದಯ ನಾಚಿಕೆಯಿಂದ ಅದೇಕೆ ಸಿಡಿದು ಹೋಗುವುದಿಲ್ಲವೋ ಕಾಣೆ" ಎಂದುಕೊಂಡು ಕದಡಿದ ಆ ತನ್ನ ಮನಸ್ಸನ್ನು ಸಮಾಧಾನಪಡಿಸಿಕೊಳ್ಳಲು ಶಯನಗೃಹಕ್ಕೆ ತೆರಳಿದನು.

ಚಂದ್ರಗುಪ್ತಚಾಣಕ್ಯರಿಗೆ ಈ ವಿಚಿತ್ರರೀತಿಯಿಂದ ಕಪಟಕಲಹ ನಡೆದುಹೋಯಿತು. ಈ ಸುದ್ದಿ ಬಹು ಬೇಗನೆಯೇ ರಾಜಧಾನಿಯಲ್ಲೆಲ್ಲ ಹರಡಿತು. ಅರಮನೆಯವರೂ ಹಲವರು ಪ್ರಜೆಗಳೂ ಅದು ದಿಟವೆಂದೇ ಭಾವಿಸಿದರು. ರಾಕ್ಷಸಪಕ್ಷಪಾತಿಗಳೆಲ್ಲರೂ ಅದರಿಂದ ಉತ್ತೇಜಿತರಾದರು. ರಾಕ್ಷಸನ ಗೂಢಚಾರನಾದ ಕರಭಕನಂತೂ ಈ ವಿದ್ಯಮಾನವನ್ನು ಒಡನೆಯೇ ತನ್ನ ಒಡೆಯನಿಗೆ ತಿಳಿಸಬಯಸಿ ನಗರದಿಂದ ಅಂದೇ ಮಲಯಕೇತುವಿನ ರಾಜಧಾನಿಗೆ ಪ್ರಯಾಣ ಬೆಳಸಿ ರಾಕ್ಷಸನನ್ನು ಕಂಡು ಎಲ್ಲವನ್ನೂ ಅರಿಕೆಮಾಡುತ್ತಿದ್ದನು.

ಇದೇ ಸಮಯದಲ್ಲಿಯೇ ಕುಮಾರಮಲಯಕೇತುವೂ ಅಮಾತ್ಯರಾಕ್ಷಸನಿಗೆ ತಲೆನೋವು ಹಿಡಿದಿರುವುದೆಂದು ಕೇಳಿ ಅವನನ್ನು ಕಾಣಲು ತಾನಾಗಿಯೇ ಹೊರಟನು. ಭಾಗುರಾಯಣನೂ ಅವನನ್ನು ಹಿಂಬಾಲಿಸಿದನು. ಬರುತ್ತ ಮಲಯಕೇತು, "ಭಾಗುರಾಯಣ, 'ರಾಕ್ಷಸನ ಮೂಲಕ ನಿನ್ನನ್ನು ಆಶ್ರಯಿಸ ಬಯಸುತ್ತಿಲ್ಲ, ನಿನ್ನ ಸೇನಾಧಿಪತಿಯಾದ ಶಿಖರಕನ ಮೂಲಕ' ಎಂದು ಭದ್ರಭಟಾದಿಗಳು ಹೇಳಲು ಅದೇನು ಕಾರಣವೊ ?" ಎಂದು ಪ್ರಶ್ನಿಸಿದನು. ಭಾಗುರಾಯಣನಿಗೆ ಈ ಪ್ರಶ್ನೆ ಬಹಳ ಸಂತೋಷವನ್ನುಂಟುಮಾಡಿತು. ಅದಕ್ಕೆ ಉತ್ತರವನ್ನು ಹೇಳುವ ನೆಪದಿಂದ ಮಲಯಕೇತುವಿಗೂ ರಾಕ್ಷಸನಿಗೂ ಭೇದವನ್ನು ಕಲ್ಪಿಸ ಬಯಸಿದನು. ಸ್ವಲ್ಪ ಕಹಿಯಾದ ಮಾತುಗಳಿಂದಲೇ "ಕುಮಾರ, ಕಾರಣ ಸ್ಪಷ್ಟವಾಗಿಯೇ ಇದೆ. ಯಾರನ್ನು ನೀನು ಹೆಚ್ಚಾಗಿ ಗೌರವಿ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಸುವೆಯೋ ಅವರ ಮೂಲಕ ನಿನ್ನನ್ನು ಆಶ್ರಯಿಸುವುದೆಂದು ಅವರು ಹೀಗೆ ಮಾಡಿರಬಹುದು. ನಿನಗೆ ರಾಕ್ಷಸನಲ್ಲಿ ಅಚ್ಚಳಿಯದ ಗೌರವವಿರುವುದು ಉಚಿತವೆ! ಆದರೆ ರಾಕ್ಷಸನಿಗೆ ಚಾಣಕ್ಯನಲ್ಲಿ ಹಗೆಯೇ ಹೊರತು ಚಂದ್ರಗುಪ್ತನಲ್ಲಿ ಅಲ್ಲ. ಎಷ್ಟಾದರೂ ಚಂದ್ರಗುಪ್ತನು ನಂದವಂಶೀಯನೇ ಅಲ್ಲವೆ? ಅವನಲ್ಲಿ ರಾಕ್ಷಸನಿಗೆ ಭಕ್ತಿ ಇಲ್ಲದೆ ಇರುತ್ತದೆಯೆ? ಒಂದು ವೇಳೆ ಆ ಚಾಣಕ್ಯನಿಗೂ ಚಂದ್ರಗುಪ್ತನಿಗೂ ವೈಮನಸ್ಯವುಂಟಾಗಿ ಚಂದ್ರಗುಪ್ತನು ಚಾಣಕ್ಯನನ್ನು ಆಚೆಗಟ್ಟಿದರೆ, ಈ ರಾಕ್ಷಸನೇ ಅವನೊಡನೆ ಸಂಧಿಮಾಡಿಕೊಂಡಾನು. ಅಥವಾ ಚಂದ್ರಗುಪ್ತನೇ ಇವನನ್ನು ಮಂತ್ರಿಯಾಗಬೇಕೆಂದು ಒತ್ತಾಯಪಡಿಸಿದರೂ ಆಶ್ಚರ್ಯವೇನೂ ಅಲ್ಲ" ಎಂದನು.

ಈ ಮಾತುಗಳೆಲ್ಲ ಮುಂದಾಲೋಚನೆಯೇನೂ ಇಲ್ಲದ ಮಲಯಕೇತುವಿನ ಮನಸ್ಸಿನಲ್ಲಿ—ಇರಬಹುದೆ? ಇದ್ದರೂ ಇರಬಹುದು—ಎಂಬ ವಿಕಲ್ಪಗಳನ್ನುಂಟುಮಾಡಿದುವು. ದುರ್ದೈವವಶದಿಂದ ಇದೇ ವಿಕಲ್ಪಗಳೇ ಕುಮಾರನ ದುಡುಕಿನಿಂದ ಅವನ ಭಾಗಕ್ಕೆ ಅಧಃಪಾತವನ್ನು ತಂದೊಡ್ಡುವ ವಿಪತ್ತಾಗಿ ಪರಿಣಮಿಸಿದವು.

ಮಲಯಕೇತುವೂ ಭಾಗುರಾಯಣನೂ ರಾಕ್ಷಸನ ಮಂದಿರಕ್ಕೆ ಬರುವವೇಳೆಗೆ ಸರಿಯಾಗಿ, "ಅವನು ಸ್ತನಕಳಶನನ್ನು ಕಂಡಿದ್ದೆಯಾ ಕರಭಕ?" ಎಂದು ಪ್ರಶ್ನಿಸಿದುದು ಅವನಿಗೆ ಕೇಳಿಸಿತು. ಒಡನೆಯೆ ಭಾಗುರಾಯಣನು ಮತ್ತೊಮ್ಮೆ ವಿಷಬೀಜವನ್ನು ಬಿತ್ತಬಯಸಿ, "ಕುಮಾರ, ಇದು ಕುಸುಮಪುರದ ಸುದ್ದಿಯೆಂದು ತೋರುತ್ತದೆ" ಎಂದನು. ಮಲಯಕೇತು ಮುಂದೆ ನಡೆಯುವ ಮಾತುಕತೆಗಳನ್ನು ಮರೆಯಲ್ಲಿದ್ದೇ ಕೇಳಬಯಸಿ ಅಲ್ಲಿ ನಿಂತನು. ಕರಭಕನು ಚಂದ್ರಗುಪ್ತ ಚಾಣಕ್ಯರಿಗೆ ನಡೆದ ವೈಮನಸ್ಯಪ್ರಸಂಗವನ್ನು ವಿಸ್ತಾರವಾಗಿ ಬಿನ್ನವಿಸಿದನು. ಅಮಾತ್ಯನು, "ಹಾಗಾದರೆ ಈಗ ಚಾಣಕ್ಯನೆಲ್ಲಿರುವನು?" ಎಂದು ಮತ್ತೆ ಪ್ರಶ್ನಿಸಿದನು. ಕರಭಕನು, "ಅವನು ಸದ್ಯಕ್ಕೆ ಪಾಟಲೀಪುತ್ರದಲ್ಲಿಯೇ ಇದ್ದಾನೆ. ತಪೋವನಕ್ಕೆ ಹೋಗಬೇಕೆಂದು ಉದ್ಯಮಿಸುತ್ತಿರುವನು" ಎಂದು ಉತ್ತರವಿತ್ತನು. ರಾಕ್ಷಸನಿಗೆ ಮೊದಮೊದಲು ಕರಭಕನ ಕುಸುಮಪುರವೃತ್ತಾಂತನಿರೂಪಣ ಸ್ವಲ್ಪ ಉತ್ಸಾಹವನ್ನು

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ತುಂಬಿದರೂ ಆಮೇಲೆ ಅದು ಇದ್ದಕ್ಕಿದ್ದಂತೆಯೇ ಕುಂಟಿತು. ಆದರೂ ಚಾಣಕ್ಯನು ಮುನಿದು ಮಂತ್ರಿತ್ವವನ್ನು ತೊರೆದಿರುವುದೇ ಚಂದ್ರಗುಪ್ತರಾಜ್ಯವನ್ನು ಜಯಿಸಲು ಸಾಕಾದಷ್ಟು ಸಹಕಾರಿ ಎಂದು ಬಗೆದು ಒಡನೆಯೇ ಮಲಯಕೇತುವನ್ನು ಕಾಣಬೇಕೆಂದುಕೊಂಡನು. ಈ ಮಾತನ್ನು ಕೇಳುತ್ತಿದ್ದ ಮಲಯಕೇತು ಮರೆಯಿಂದ ಮುಂದೆಬಂದು, "ಆರ್ಯನನ್ನು ಕಾಣಲು ನಾನೇ ಬಂದಿರುವೆನು" ಎಂದನು. ಇದರಿಂದ ರಾಕ್ಷಸನಿಗೆ ಆಶ್ಚರ್ಯವಂಕುರಿಸಿದರೂ ತನ್ನ ವಿಷಯದಲ್ಲಿ ಕುಮಾರನು ಸಂಶಯಗೊಂಡಿರುವನೆಂಬುದು ಅರಿವಾಗಲಿಲ್ಲ. ಆದರದಿಂದ ಅವನನ್ನು ಬರಮಾಡಿಕೊಂಡನು. ಮಲಯಕೇತು ವಿನಯವನ್ನೇ ತೋರಿ, "ಆರ್ಯ, ತಮಗೆ ತಲೆನೋವು ಕಡಮೆಯಾಗಿದೆಯೆ?" ಎಂದು ಕೇಳಿದನು.

ರಾಕ್ಷಸ:—ಕುಮಾರ, ನೀನು ಕುಮಾರಮಲಯಕೇತುವೆನ್ನಿಸಿಕೊಳ್ಳದೆ ರಾಜಾಧಿರಾಜನೆನಿಸುವವರೆಗೂ ನನ್ನ ತಲೆನೋವು ಕಡಮೆಯಾಗುವುದೆಂತು?

ಮಲಯ:—ಆರ್ಯನ ನೆರವಿರುವಾಗ್ಗೆ ಅದು ಅಸಾಧ್ಯವೇನೂ ಅಲ್ಲ. ಆದುದರಿಂದ ಪ್ರಕೃತದಲ್ಲಿ ನಾವು ಶೇಖರಿಸಿಟ್ಟಿರುವ ಸೈನ್ಯವನ್ನು ಶತ್ರುವ್ಯಸನವನ್ನೇ ನಿರೀಕ್ಷಿಸುತ್ತ ಎಷ್ಟು ಕಾಲ ಸುಮ್ಮನಿರಿಸುವುದು?

ರಾಕ್ಷಸ:—ಕುಮಾರ, ಇನ್ನು ಕಾಲಹರಣಕ್ಕೆ ಅವಕಾಶವೆಲ್ಲಿಯದು? ಜೈತ್ರಯಾತ್ರೆಗೆ ಈಗಲೇ ಹೊರಡಬಹುದು.

ಮಲಯ:—ಆರ್ಯ, ಶತ್ರುವ್ಯಸನವೇನಾದರೂ ಕಂಡುಬಂದಿತೆ?

ರಾಕ್ಷಸ:—ಹೌದು, ಬೇರಿನ್ನೇನು? ಸಚಿವವ್ಯಸನ! ಕುಮಾರ, ಚಂದ್ರಗುಪ್ತನು ಚಾಣಕ್ಯನನ್ನು ಹೊರದೂಡಿದ್ದಾನೆ.

ಮಲಯ:—ಆರ್ಯ, ಸಚಿವವ್ಯಸನವೊಂದೇನೆ?

ರಾಕ್ಷಸ:—ಕುಮಾರ, ಇತರ ರಾಜರಿಗಾದರೆ ಸಚಿವವ್ಯಸನ ಒಂದು ವೇಳೆ ವ್ಯಸನವಾಗದಿರಬಹುದು. ಆದರೆ ಚಂದ್ರಗುಪ್ತನಿಗೆ ಹಾಗಲ್ಲ.

ಮಲಯಕೇತು ಈ ಮಾತನ್ನು ಒಪ್ಪದೆ ಆ ಮಾತು ಈ ಮಾತು ಬೆಳೆಸತೊಡಗಿದನು. ಭಾಗುರಾಯಣನು ಮೊದಲೇ ಅವನ ಮನಸ್ಸಿನಲ್ಲಿ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಭೇದಬೀಜವನ್ನು ಬಿತ್ತಿದ್ದನು. ಆದರೂ ಮಲಯಕೇತು ಇನ್ನೂ ರಾಕ್ಷಸನಲ್ಲಿ ನಂಬುಗೆಯನ್ನಿಟ್ಟಿದ್ದುದರಿಂದ ತುಯ್ದಾಡುವ ಮನಸ್ಸಿನಿಂದ ಅವನ ಅಭಿಮತದಂತೆಯೇ ಪಾಟಲೀಪುತ್ರದಮೇಲೆ ದಂಡೆತ್ತಿ ಹೊರಡುವುದಾಗಿ ನಿರ್ಧರಿಸಿ ಭಾಗುರಾಯಣನ ಸೂಚನೆಯಂತೆ ಆ ನೇಲಣ ಕಾರ್ಯವನ್ನಾಲೋಚಿಸಲು ಅಲ್ಲಿಂದ ಹೊರಟುಹೋದನು.

ದಂಡಯಾತ್ರೆಗೆ ಮಲಯಕೇತು ಸಮ್ಮತಿಯಿತ್ತುದರಿಂದ ರಾಕ್ಷಸನು ಉತ್ಸಾಹಭರಿತನಾಗಿ ಸೈನ್ಯಪ್ರಯಾಣಕ್ಕೆ ಒಂದು ಶುಭಮುಹೂರ್ತವನ್ನು ಗೊತ್ತುಮಾಡಲು ಯಾವನಾದರೂ ಒಬ್ಬ ಜೋಯಿಸನನ್ನು ಕರೆದು ತಾರೆಂದು ಚಾರನಿಗೆ ಆಜ್ಞಾಪಿಸಿದನು. ಚಾರನು ಅತ್ತಿತ್ತನೋಡಿ ಕ್ಷಪಣಕ ಜೀವಸಿದ್ಧಿಯೇ ಕಣ್ಣಿಗೆ ಬೀಳಲು ಅವನನ್ನೇ ಕರೆದುತಂದನು. ರಾಕ್ಷಸನು ಅವನನ್ನು ಕಂಡೊಡನೆ ಪ್ರಥಮದಲ್ಲಿಯೇ ಆ ಕ್ಷಪಣಕದರ್ಶನ ಅಮಂಗಳಕರವೆಂದು ಭಾವಿಸಿದನು; ಅವನು ಗೊತ್ತುಮಾಡಿದ್ದ ಮುಹೂರ್ತ ಅಪ್ರಶಸ್ತವೆಂದೂ ಬಗೆದನು. ಆದರೂ ಜೀವಸಿದ್ಧಿಯನ್ನು ಅಲ್ಲಗಳೆಯುವ ಮನಸ್ಸಿಲ್ಲದೆ, "ಅಯ್ಯಾ, ಮತ್ತಾರಾದರೂ ಜ್ಯೋತಿಷ್ಯರೊಡನೆ ಮುಹೂರ್ತವನ್ನು ನಿರ್ಧರಿಸಿಬರುವುದು ಒಳ್ಳೆಯದಲ್ಲವೆ?" ಎಂದು ಅವನಿಗೆ ಹೇಳಿದನು. ಈ ಮಾತನ್ನು ಕೇಳಿದೊಡನೆಯೆ ಜೀವಸಿದ್ಧಿ ತನಗೆ ದೊಡ್ಡ ಅಪಮಾನವೇ ಆಗಿಹೋಯಿತೆಂದು ರೇಗಿ ಹೊರಟುಹೋದನು.

ಅಂತು ರಣಪ್ರಯಾಣಕ್ಕೆ ಮುಹೂರ್ತ ಗೊತ್ತಾಯಿತು. ಮಲಯಕೇತುವಿನ ಅಪಾರಸೈನ್ಯ ಪ್ರಯಾಣ ಬೆಳಸಿ ಕುಸುಮಪುರಕ್ಕೆ ಬಹು ಸಮೀಪದಲ್ಲಿರುವುದರಿಂದ ಯಾರೇ ಆದರೂ ಉಂಡಿಗೆಯಿಲ್ಲದೆ ಪಾಳೆಯವನ್ನು ಬಿಟ್ಟುಹೋಗಕೂಡದೆಂದೂ ಭಾಗುರಾಯಣನು ಉಂಡಿಗೆಯನ್ನು ಉಚಿತವರಿತು ಕೊಡುವ ಅಧಿಕಾರವನ್ನು ವಹಿಸತಕ್ಕುದೆಂದೂ ಮಲಯಕೇತು ಅಪ್ಪಣೆಮಾಡಿದನು.

ರಾಕ್ಷಸನನ್ನು ಮಲಯಕೇತುವಿನ ಆಶ್ರಯದಿಂದ ಬೇರ್ಪಡಿಸುವ ಚಾಣಕ್ಯನ ಮಹಾಸೂತ್ರದ ವ್ಯಾಖ್ಯಾತೃಗಳಲ್ಲಿ ಪ್ರಮುಖನಾದ ಭಾಗುರಾಯಣನು ತನ್ನ ಕೆಲಸವನ್ನು ಬಹು ಕುಶಲತೆಯಿಂದ ಮುಂದುವರಿಸಿದನು. ಆದಕ್ಕೆ ಜೀವಸಿದ್ಧಿ—ಇಂದುಶರ್ಮ—ಸಂಪೂರ್ಣವಾದ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಮುಕ್ತಾಯವನ್ನು ಕೊಡುವ ಪ್ರಯತ್ನದಲ್ಲಿ ತೊಡಗಿದನು. ಉಂಡಿಗೆಯ ಸುದ್ದಿಯನ್ನು ಅರಿತು ಅದನ್ನೇ ಶಸ್ತ್ರವನ್ನಾಗಿ ಉಪಯೋಗಿಸಲು ಅವನು ಸಂಕಲ್ಪಿಸಿ ಭಾಗುರಾಯಣನನ್ನು ಕಂಡನು. ಭಾಗುರಾಯಣನೂ ಏನೂ ತಿಳಿಯದವನಂತೆ, "ಭದಂತ, ರಾಕ್ಷಸನ ಪ್ರಯೋಜನಕ್ಕಾಗಿ ಹೋಗುತ್ತಿರುವೆಯೊ?" ಎಂದು ಕೇಳಿದನು. ಜೀವಸಿದ್ಧಿ, "ಅಯ್ಯಯ್ಯೋ, ನಾನು ರಾಕ್ಷಸನನ್ನೂ ಅರಿಯೆ, ಪಿಶಾಚನನ್ನೂ ಅರಿಯೆ" ಎಂದು ಅರಚಿದನು. "ಮಿತ್ರನಲ್ಲೇಕಿಷ್ಟು ಕೋಪ? ಅವನು ಮಾಡಿದ ಅಪರಾಧವಾದರೂ ಏನು?" ಎಂದು ಭಾಗುರಾಯಣನು ಕೇಳಲು ಜೀವಸಿದ್ಧಿ, "ಅಯ್ಯೋ ಪಾಪ, ರಾಕ್ಷಸನು ನನಗಾವ ಅಪರಾಧವನ್ನೂ ಮಾಡಲಿಲ್ಲ, ಹತಭಾಗ್ಯನಾದ ನಾನು ಮಾಡಿದ ಕಾರ್ಯಕ್ಕೆ ನಾನೇ ಲಜ್ಜಿತನಾಗಿದ್ದೇನೆ" ಎಂದನು. ಭಾಗುರಾಯಣನು ಕುತೂಹಲಿಯಾಗಿ, "ಅಂತಹುದೇನು?" ಎನ್ನಲು, ಅವನು ಮೊದಮೊದಲು ವಿಷಯವನ್ನು ಹೇಳಲು ನಾಚಿ, ಹೇಳಿದ ಹೊರತು ಉಂಡಿಗೆಯನ್ನು ಕೊಡುವುದಿಲ್ಲವೆಂದು ಭಾಗುರಾಯಣನು ಬಲಾತ್ಕರಿಸಿದ ಬಳಿಕ, ತಾನು ಸೃಜಿಸಿದ ವಿಷಕನ್ಯೆಯಿಂದ ಪರ್ವತೇಶ್ವರನು ಮಡಿದ ಸುದ್ದಿಯನ್ನು ತಿಳಿಸಿದನು.

ಜೀವಸಿದ್ಧಿಗೂ ಭಾಗುರಾಯಣನಿಗೂ ನಡೆದ ಈ ಪ್ರಸಂಗವನ್ನು ಮಲಯಕೇತು ಮರೆಯಲ್ಲಿದ್ದೇ ಕೇಳುತ್ತಿದ್ದನು. ರಾಕ್ಷಸನೇ ವಿಷಕನ್ಯೆಯನ್ನು ತನ್ನ ತಂದೆಯ ಮೇಲೆ ಪ್ರಯೋಗಿಸಿದ ಪಾಪಿಯೆಂದು ಅವನಿಗೆ ಮನದಟ್ಟಾಯಿತು. ಆಗ ರಾಕ್ಷಸನ ವಿಷಯದಲ್ಲಿ ಅವನಿಗುಂಟಾದ ಕೋಪಕ್ಕೆ ಎಣೆಯಿರಲಿಲ್ಲ. ತಂದೆಯ ಆ ವಿಧವಾದ ವಿಪತ್ತಿನಿಂದ ಅವನ ಮನಸ್ಸಿನಲ್ಲಿ ಹುದುಗಿದ್ದ ದುಃಖ ಹೊಚ್ಚಹೊಸತಾಯಿತು. ಆ ದುಃಖ, ಆ ಬಗೆಯ ಕೋಪ—ಎರಡೂ ಎರಡು ವಿಧದಲ್ಲಿ ಅವನ ಮನಸ್ಸನ್ನು ತಳಮಳಗೊಳಿಸುತ್ತಿರಲು ಅವನು ಮರೆಯಿಂದ ಮುಂದೆ ಬಂದು ಭಾಗುರಾಯಣನಿಗೆ ಕಾಣಿಸಿಕೊಂಡನು. ಆಗಿನ ಅವನ ಮನಃಸ್ಥಿತಿಯನ್ನು ಚೆನ್ನಾಗಿ ಕಂಡುಕೊಂಡ ಭಾಗುರಾಯಣನು ರಾಕ್ಷಸನಿಗೆ ಇದರಿಂದ ಪ್ರಾಣಾಪಾಯವೇ ಸಂಭವಿಸೀತೆಂದು ಶಂಕಿಸಿ, ಆರ್ಯಚಾಣಕ್ಯನ ಅಪ್ಪಣೆಯಂತೆ ಅವನನ್ನು ಉಳಿಸಬಯಸಿ, "ಕುಮಾರ, ರಾಕ್ಷಸನು ರಾಕ್ಷಸನೇ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಆದರೂ ಹಾಗಾದುದು ಅವನ ತಪ್ಪಲ್ಲ. ಅದು ಅವನಲ್ಲಿದ್ದ ಒಂದು ಗುಣವೆಂದೇ ಹೇಳಬೇಕು. ಏಕೆನ್ನುವೆಯೊ? ಅಗ್ಗೆ ಸರ್ವಾರ್ಥಸಿದ್ಧಿ ಅರಸನಾಗಬೇಕೆಂಬ ಕಾಂಕ್ಷೆ ಅವನನ್ನು ಪರ್ವತೇಶ್ವರನ ಸಂಹಾರದಲ್ಲಿ ತೊಡಗಿಸಿತು. ಹಾಗೆಮಾಡಿದುದು ಸ್ವಾಮಿಭಕ್ತಿಯಿಂದಲೇ ಅಲ್ಲವೆ? ಪ್ರಭುವಿಗೆ ಎರಡು ಬಗೆಯದ ಅವನ ಈ ಒಂದು ಸದ್ಗುಣವನ್ನು ಮೆಚ್ಚಿ ನಾವು ರಾಜ್ಯ ಕೈಸೇರುವವರೆಗೂ ಅವನನ್ನು ಪರಿಗ್ರಹಿಸಿದಂತೆಯೇ ನಟಿಸುತ್ತಿರಬೇಕು. ಆ ಮೇಲೆ ತೊರೆಯುವುದೂ ಸ್ವೀಕರಿಸುವುದೂ ನಿನ್ನ ಇಷ್ಟದಂತಾಗಲಿ" ಎಂದು ಹೇಳಿದನು. ಮಲಯಕೇತು ಈ ಮಾತುಗಳಿಗೆ ಒಪ್ಪಿದನು.

ಇಷ್ಟರಲ್ಲಿಯೇ ರಾಜಪುರುಷನು ಸಿದ್ಧಾರ್ಥಕನನ್ನು ಹಿಡಿದು ತಂದು, "ಕುಮಾರ ಇವನು ಉಂಡಿಗೆಯಿಲ್ಲದೆಯೇ ಪಾಳೆಯವನ್ನು ಬಿಟ್ಟು ಹೊರಡುತ್ತಿದ್ದನು" ಎಂದು ಅರಿಕೆಮಾಡಿದನು. ಸಿದ್ಧಾರ್ಥಕನು ತಾನು ರಾಕ್ಷಸನ ಸೇವಕನೆಂದನು. ಉಂಡಿಗೆಯಿಲ್ಲದೆಯೇ ಹೊರಟು ದೇಕೆಂದು ಪ್ರಶ್ನಿಸಲು "ಕಾರ್ಯಗೌರವದಿಂದ" ಎಂದು ಅವನಿಂದ ಉತ್ತರ ಬಂದಿತು. ಅಂಥ ಕಾರ್ಯಗೌರವವೇನೆಂದು ಕೇಳಲು ತನ್ನ ಬಳಿಯಲ್ಲಿದ್ದ ಪತ್ರವನ್ನು ಭಾಗುರಾಯಣನಿಗೆ ಕೊಟ್ಟನು. ಅದರ ಮೇಲೆ ರಾಕ್ಷಸನ ಮುದ್ರಿಕೆಯಿದ್ದಿತು. ಭಾಗುರಾಯಣನು ಮುದ್ರೆ ಕೆಡದಂತೆ ಅದನ್ನೊಡೆದು ಮಲಯಕೇತುವಿನ ಕೈಗೆ ಕೊಟ್ಟನು. ಮಲಯಕೇತು ಪತ್ರದ ಒಕ್ಕಣೆಯನ್ನು ಕಣ್ಣಿಟ್ಟು ನೋಡಿದಂತೆಲ್ಲ ಅದು ತನ್ನ ಮೂಲೋತ್ಪಾಟನಕ್ಕೆ ಹೂಡಿದ್ದ ಹಂಚಿಕೆಯೆಂದು ತಿಳಿದನು.

ಆ ಪತ್ರದ ಬರೆಹವೇ ಒಂದು ತೀರಾಗಿದ್ದಿತು: "ಸ್ವಸ್ತಿ. ಒಂದಾನೊಂದು ಸ್ಥಳದಿಂದ ಒಬ್ಬಾನೊಬ್ಬನು ಒಬ್ಬಾನೊಬ್ಬ ಪ್ರಧಾನ ಪುರುಷನಿಗೆ ತಿಳಿಸುತ್ತಾನೆ. ನಮ್ಮ ಪ್ರತಿಪಕ್ಷದವನನ್ನು ನಿರಾಕರಿಸಿ ಸತ್ಯವಾದಿಯಾದ ನೀನು ಸತ್ಯವಾದಿತ್ವವನ್ನು ತೋರಿದ್ದೀಯೆ. ಈಗಲೂ ಮೊದಲು ಸಂಧಿ ಪ್ರಯತ್ನದಲ್ಲಿ ಸೇರಿದ ನಮ್ಮ ಮಿತ್ರರಿಗೆ ಪ್ರತಿಜ್ಞೆಮಾಡಿಕೊಟ್ಟದ್ದಂತೆ ನಡಸಿ ಪ್ರೀತಿಯನ್ನುಂಟುಮಾಡತಕ್ಕುದು. ಸತ್ಯಸಂಧನಿಂದ ಅನುಗೃಹೀತರಾಗುವ ಇವರೂ ಅಂತೆಯೇ ಸ್ವಾಶ್ರಯವನ್ನಾದರೂ ನಾಶಗೊಳಿಸಿ ಉಪ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಕಾರಿಯನ್ನಾಶ್ರಯಿಸುವರು. ಈ ವಿಷಯವನ್ನು ಸತ್ಯವಂತನು ಮರೆತಿರುವ ನೆಂದು ಸ್ಮರಣೆಗೆ ತರುತ್ತಿದ್ದೇನೆ. ಇವರಲ್ಲಿ ಕೆಲವರು ಶತ್ರುವಿನ ಕೋಶ ವನ್ನೂ, ಗಜ ತುರಗಾದಿ ಸೈನ್ಯವನ್ನೂ ಪಡೆಯಬಯಸುತ್ತಾರೆ. ಇನ್ನು ಕೆಲವರು ದೇಶವನ್ನು ಕೋರುತ್ತಾರೆ. ಸತ್ಯವಾದಿ ಕಳುಹಿಸಿದ ಆಭರಣ ಗಳು ಮೂರೂ ಸೇರಿದವು. ನಾನು ಪತ್ರಿಕೆಯೊಡನೆ ಸ್ವಲ್ಪ ಕಾಣಿಕೆ ಯನ್ನೂ ಕಳುಹಿಸಿರುವೆನು; ಸ್ವೀಕರಿಸುವುದು. ಕೇಳಬೇಕಾದ ಉಳಿದ ಸಂಗತಿಯನ್ನು ಆಪ್ತತಮನಾದ ಈ ಸಿದ್ಧಾರ್ಥಕನಿಂದ ಕೇಳತಕ್ಕುದು."

ಇದೇ ಆ ಪತ್ರದ ಬರೆಹ. ಮಲಯಕೇತುವಿಗೆ ಪತ್ರದ ಅಭಿಪ್ರಾಯ ವೇನೆಂದು ತಿಳಿಯಲಿಲ್ಲ. ಅವನ ಸೂಚನೆಯಂತೆ ಭಾಗುರಾಯಣನು ಸಿದ್ಧಾರ್ಥಕನನ್ನೇ ಪ್ರಶ್ನಿಸಿದನು. ಸಿದ್ಧಾರ್ಥಕನು ಆ ಪತ್ರದ ವಿಚಾರವೇ ತನಗೆ ತಿಳಿಯದೆಂದು ಸಾಧಿಸಿದನು. ಆಮೇಲೆ ಅವನ ಬಳಿಯಲ್ಲಿದ್ದ ಪೆಟ್ಟಿಗೆಯನ್ನು ಪರೀಕ್ಷಿಸಿದ್ದಾಯಿತು. ಅದೂ ರಾಕ್ಷಸನ ಮುದ್ರಿಕೆ ಯಿಂದ ಮುದ್ರಿತವಾಗಿದ್ದಿತು. ಒಡೆದು ನೋಡಲು, ಮಲಯಕೇತು ತನ್ನ ಕೈಯಾರ ತೆಗೆದು ರಾಕ್ಷಸನಿಗೆ ಬಹುಮತಿಸಿದ್ದ ಕಂಠಾಭರಣ ಅದರಲ್ಲಿದ್ದಿತು. ಮಲಯಕೇತುವಿಗೆ ಸಂಶಯದ ಮೇಲೆ ಸಂಶಯಹುಟ್ಟಿ ದಿಕ್ಕೇ ತೋರದಾಯಿತು. ಭಾಗುರಾಯಣನು ವಿಷಯವೆಲ್ಲವನ್ನೂ ತಿಳಿಸುವವರೆಗೂ ಸಿದ್ಧಾರ್ಥಕನನ್ನು ಹಿಡಿದು ಹೊಡೆಯತಕ್ಕುದೆಂದು ಭಾಸುರಕನಿಗೆ ಆಜ್ಞಾಪಿಸಿದನು. ಹಲವಾರು ಪೆಟ್ಟುಗಳು ಬಿದ್ದಮೇಲೆ ಸಿದ್ಧಾರ್ಥಕನು ಮಲಯಕೇತುವಿಗೇ ವಿಷಯವನ್ನು ತಿಳಿಸುವುದಾಗಿ ಅವನಿಂದ ಅಭಯವನ್ನು ಪಡೆದು ಚಾಣಕ್ಯನು ತನಗೆ ಹೇಳಿಕೊಟ್ಟಿದ್ದಂತೆ— "ಕುಮಾರ, ಅಮಾತ್ಯನು ಈ ಪತ್ರವನ್ನು ನನ್ನ ಮೂಲಕ ಚಂದ್ರ ಗುಪ್ತನಿಗೆ ಕಳುಹಿಸಿದ್ದಾನೆ. ನಾನು ಅವನಿಗೆ ಹೇಳಬೇಕಾದ ಮಾತಿದು: ನನಗೆ ಮಿತ್ರರು ಐದು ಮಂದಿ, ಕುಲೂತಾಧಿಪತಿ ಚಿತ್ರವರ್ಮ, ಮಲಯ ದೇಶದ ದೊರೆ ಸಿಂಹನಾದ, ಕಾಶ್ಮೀರ ರಾಜ ಪುಷ್ಕರಾಕ್ಷ, ಸಿಂಧುರಾಜ ಸಿಂಧಷೇಣ, ಪಾರಸೀಕ ಪ್ರಭು ಮೇಘಾಕ್ಷ. ಇವರಲ್ಲಿ ಮೊದಲ ಮೂವರೂ ಮಲಯಕೇತುವಿನ ರಾಜ್ಯವನ್ನೂ, ಉಳಿದವರು ಅವನ ಹಸ್ತಿಬಲ ಭಂಡಾರಗಳನ್ನೂ ಬಯಸುತ್ತಿದ್ದಾರೆ. ನೀನು ಚಾಣಕ್ಯನನ್ನು

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ನಿರಾಕರಿಸಿ ನನಗೆ ಪ್ರೀತಿಯನ್ನುಂಟುಮಾಡಿದೆ. ಪ್ರಕೃತದಲ್ಲಿ ನಿನ್ನ ಮೊದಲ ಪ್ರತಿಜ್ಞೆಯಂತೆ ಈ ಮಿತ್ರರಿಗೂ ಉಪಕಾರಮಾಡಿ ಮತ್ತೂ ಪ್ರೀತಿಯನ್ನುಂಟುಮಾಡತಕ್ಕದ್ದು" ಎಂದು ಹೇಳಿಬಿಟ್ಟನು.

ಮಲಯಕೇತುವಿಗೆ ಇದನ್ನು ಕೇಳಿ ಸಿಡಿಲು ಬಡಿದಂತೆ ಆಯಿತು. ಯಾರನ್ನು ನಚ್ಚಿನ ಗೆಳೆಯರೆಂದು ಬಗೆದು ಪ್ರಾಣಕ್ಕಿಂತಲೂ ಹೆಚ್ಚಾಗಿ ಪ್ರೀತಿಸುತ್ತಿದ್ದನೋ ಆ ಚಿತ್ರವರ್ಮನೇ ಮೊದಲಾದ ಸಾಮಂತರು ತನಗೆ ದ್ರೋಹಮಾಡುತ್ತಿರುವರೆಂದು ಅವನಿಗೆ ಮನದಟ್ಟಾಯಿತು. ರಾಕ್ಷಸನನ್ನು ಮಿತ್ರನೆಂದೇ ಅಲ್ಲದೆ ಹಿರಿಯನೆಂದೂ ವಿಶ್ವಾಸಗೌರವಗಳಿಂದ ಕಂಡುದು ಮಹಾಪರಾಧವಾಯಿತೆಂದು ಅವನು ಬಹುವಾಗಿ ದುಃಖಿಸಿದನು. ತರುವಾಯ ದುಃಖವನ್ನಡಗಿಸಿಕೊಂಡು ಈ ವಿದ್ವೇಷವೃತ್ತಾಂತವನ್ನು ಕೂಲಂಕಷವಾಗಿ ಪರಿಶೀಲಿಸಿಯೇ ಬಿಡತಕ್ಕುದೆಂದು ಅವನು ಒಡನೆಯೇ ರಾಕ್ಷಸನನ್ನು ಕರೆತರಲು ಆಳನ್ನಟ್ಟಿದನು. ರಾಕ್ಷಸನು ಮಲಯಕೇತುವಿನ ಕರೆಯನ್ನು ಮನ್ನಿಸಿ ಅವನು ತನಗೆ ಬಹುಮತಿಸಿದ ಕಂಠಾಭರಣವನ್ನು ಸಿದ್ಧಾರ್ಥಕನಿಗೆ ಮೆಚ್ಚು ಕೊಟ್ಟದ್ದುದರಿಂದ ಶೂನ್ಯಕಂಠನಾಗಿ ಹೋಗಲು ಇಷ್ಟವಿಲ್ಲದೆ ತಾನು ಕ್ರಯಕ್ಕೆ ತೆಗೆದುಕೊಂಡಿದ್ದ ಆಭರಣಗಳಲ್ಲೊಂದನ್ನು ಧರಿಸಿ ಬಂದನು.

ಮಲಯಕೇತು ರಾಕ್ಷಸನನ್ನು ಆದರದಿಂದ ಬರಮಾಡಿಕೊಂಡನು. ತನ್ನ ಮನಸ್ಸಿನ ಯಾವ ಬಗೆಯ ವಿಕಾರವನ್ನೂ ಹೊರಸೂಸದೆ ಅವನಿಗೆ ಉಚಿತಾಸನವಿತ್ತು ಸತ್ಕರಿಸಿದನು. "ಅಮಾತ್ಯ, ತಾವು ಬಹಳ ದಿನಗಳಿಂದ ದರ್ಶನಭಾಗ್ಯವನ್ನು ಅನುಗ್ರಹಿಸದೆ ನನ್ನ ಮನಸ್ಸಿಗೆ ಕಾತರವಾಯಿತು" ಎಂದು ಸಾಂತ್ವವಚನವನ್ನಾಡಿದನು. ರಾಕ್ಷಸನು ಉತ್ಸಾಹಪೂರಿತನಾಗಿ, "ಕುಮಾರ, ಚೈತ್ರಯಾತ್ರೆಗೆ ಎಲ್ಲವನ್ನೂ ಸಿದ್ಧಗೊಳಿಸುವ ಕಾರ್ಯದಲ್ಲಿ ತೊಡಗಿದ್ದುದರಿಂದ ನಿನ್ನ ಆಕ್ಷೇಪಣೆಗೆ ಗುರಿಯಾಗಬೇಕಾಯಿತು" ಎನ್ನಲು ಮಲಯಕೇತು ಆ ವಿಚಾರವಾಗಿಯೇ ಕುತೂಹಲಿಯಾಗಿ ವಿವರವನ್ನು ಕೇಳಿದನು. ರಾಕ್ಷಸನು, "ಕುಮಾರ, ಸಾಮಂತರಾಜರೆಲ್ಲರೂ ನಿನ್ನ ಕಾಹಿಗಿರುತ್ತಾರೆ. ಇನ್ನು ಚೈತ್ರಯಾತ್ರೆಯೆ" ಎಂದು ಹೇಳಿದನು. ಮಲಯಕೇತುವಿಗೆ ರಾಕ್ಷಸನಾಡಿದ ಮಾತು

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಒಳಗೇ ಭಯವನ್ನು ತಂದೊಡ್ಡಿತು. ಆದರೂ ಧೀರನಾಗಿ, "ಆರ್ಯ, ಕುಸುಮಪುರಕ್ಕೆ ಹೋಗಿ ಬರುವವರು ಯಾರಾದರೂ ಇದ್ದಾರೆಯೆ?" ಎಂದು ಕೇಳಿದರು. "ಹೋಗಿ ಬರುವುದರ ಪ್ರಯೋಜನ ಇಲ್ಲಿಗೆ ಮುಗಿಯಿತು. ಇನ್ನು ಐದಾರು ದಿನಗಳಲ್ಲಿ ನಾವೇ ಅಲ್ಲಿಗೆ ಹೋಗುವವಷ್ಟೆ" ಎಂದು ರಾಕ್ಷಸನು ಉತ್ತರವಿತ್ತನು. "ಹಾಗಿದ್ದಲ್ಲಿ ಪತ್ರದೊಡನೆ ಈ ಆಳನಟ್ಟಿದುದೇಕೆ?" ಎಂದು ಮಲಯಕೇತು ಮತ್ತೆ ಪ್ರಶ್ನಿಸಲು, ರಾಕ್ಷಸನಿಗೆ ಏನೆಂದೂ ಅರಿವಾಗದೆ ಕಕ್ಕುಬಿಕ್ಕಿನ ಸ್ಥಿತಿಗೆ ಸಿಲುಕಿ ಅತ್ತಿತ್ತ ನೋಡಿ, ಸಿದ್ಧಾರ್ಥಕನು ಕಣ್ಣಿಗೆ ಬೀಳಲು ಆಶ್ಚರ್ಯ ಚಕಿತನಾಗಿ, "ಇವನಾದರೂ ಏಕೆ ಕುಸುಮಪುರಕ್ಕೆ ಹೊರಟಿದ್ದಾನು?" ಎಂದುಕೊಂಡು, "ಏನಿದು ಸಿದ್ಧಾರ್ಥಕ!" ಎಂದು ಅವನನ್ನು ಕೇಳಿದನು. ಸಿದ್ಧಾರ್ಥಕನು ಅದೊಂದು ಬಗೆಯ ನಾಣನ್ನು ನಟಿಸಿ "ಅಮಾತ್ಯನು ಪ್ರಸನ್ನನಾಗಬೇಕು. ಏಟುಗಳನ್ನು ತಡೆಯಲಾರದೆ ರಹಸ್ಯವನ್ನು ಬಿಟ್ಟುಕೊಡಬೇಕಾಯಿತು" ಎಂದು ಹೇಳಿದನು. ರಾಕ್ಷಸನಿಗೆ ಆಶ್ಚರ್ಯದ ಮೇಲೆ ಆಶ್ಚರ್ಯವಾಯಿತು. "ಅದಾವ ರಹಸ್ಯ?" ಎಂದು ಮತ್ತೊಮ್ಮೆ ಪ್ರಶ್ನಿಸಲು, ಈ ಪ್ರಶ್ನೆಗೆ ಸಿದ್ಧಾರ್ಥಕನು ಯಾವ ಉತ್ತರವನ್ನೂ ಸಮಂಜಸವಾಗಿ ಹೇಳದಿರಲು ಮಲಯಕೇತು "ಭಾಗುರಾಯಣ, ಇವನು ಒಡೆಯನ ಮುಂದೆ ಬಾಯಿಬಿಡಲಾರ. ನೀನೇ ತಿಳಿಸು" ಎಂದು ಅಪ್ಪಣೆಮಾಡಿದನು.

ಭಾಗುರಾಯಣನು, "ಅಮಾತ್ಯ, ನೀನು ಚಂದ್ರಗುಪ್ತನಿಗೆ ಈ ಪತ್ರವನ್ನು ಕೊಟ್ಟು ಕೆಲವು ಸಂಗತಿಗಳನ್ನು ಹೇಳಿ ಬಾರೆಂದು ತನ್ನನ್ನು ಕಳುಹಿಸಿರುವುದಾಗಿ ಇವನು ಹೇಳುತ್ತಿದ್ದಾನೆ" ಎಂದನು. ರಾಕ್ಷಸನಿಗೆ ಸಿಡಿಲು ಬಡಿದಂತಾಗಿ "ಭದ್ರ, ಸಿದ್ಧಾರ್ಥಕ! ಇದು ದಿಟವೆ?" ಎಂದು ಕೇಳಲು ಸಿದ್ಧಾರ್ಥಕನು ಮತ್ತೆಯೂ "ಹೊಡಿಸಿದುದರಿಂದ ನಾನು ಹೇಳಬೇಕಾಯಿತು" ಎಂದನು. ಆ ಮಾತನ್ನು ಕೇಳಿ ಅಮಾತ್ಯನು ಅವನಲ್ಲಿಯ ಕನಿಕರದಿಂದ ಮಲಯಕೇತುವನ್ನು ಕುರಿತು, "ಕುಮಾರ, ಇದು ಸುಳ್ಳು. ಪೆಟ್ಟುತಿಂದವನು ಏನನ್ನು ತಾನೆ ಹೇಳಲಾರ?" ಎಂದು ಹೇಳಿದನು. ಮಲಯಕೇತು ಆ ಮಾತಿಗೆ ಲಕ್ಷ್ಯಕೊಡದೆ ಭಾಗು

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ರಾಯಣನ ಕಡೆ ನೋಡಿ, ಪತ್ರವನ್ನು ತೋರಿಸು ಹೇಳಬೇಕಾದುದನ್ನು ಈ ಭೃತ್ಯನು ಹೇಳುತ್ತಾನೆ" ಎಂದನು. ಭಾಗುರಾಯಣನು ಪತ್ರವನ್ನು ರಾಕ್ಷಸನ ಕೈಗೆ ಕೊಡದೆ ತಾನೇ ಓದತೊಡಗಿದನು. ಅದನ್ನು ಕೇಳಿ ದೊಡನೆಯೆ ರಾಕ್ಷಸನಿಗೆ ಅದು ಕೇವಲ ಶತ್ರುಗಳ ಹೂಟವೆಂಬುದು ಅರಿವಾಯಿತು. ಅದನ್ನು ಮರೆಮಾಚದೆ ಮಲಯಕೇತುವಿಗೂ ತಿಳಿಸಿ ದನು. ಮಲಯಕೇತು, "ಬರಿಯ ಲೇಖನವನ್ನು ಕಳುಹಿಸಬಾರದೆಂದು ಈ ಆಭರಣವನ್ನೂ ಕಳುಹಿಸಿತ್ತು. ಎಂದಮೇಲೆ ಶತ್ರುಗಳ ಹೂಟ ವೆಂತಾದೀತು?" ಎಂದು ನುಡಿದು ಆ ಆಭರಣವನ್ನು ರಾಕ್ಷಸನಿಗೆ ತೋರಿದನು. ರಾಕ್ಷಸನು, "ಕುಮಾರ, ಇದನ್ನು ನಾನು ಕಳುಹಿಸಲಿಲ್ಲ. ಇದನ್ನು ನೀನೇ ನನಗೆ ಬಹುಮತಿಸಿದೆ. ಇದನ್ನೇ ನಾನು ಯಾವುದೋ ಒಂದು ಸಂತೋಷದ ಸಮಯದಲ್ಲಿ ಈ ಸಿದ್ಧಾರ್ಥಕನಿಗೆ ಬಹುಮತಿಸಿ ದ್ದೇನೆ" ಎಂದನು. ರಾಕ್ಷಸನ ಈ ವಿವರಣೆ ಮಲಯಕೇತುವಿನ ಮೇಲೆ ಸತ್ಪರಿಣಾಮವನ್ನುಂಟುಮಾಡಿತು. ಭಾಗುರಾಯಣನು ಆ ವಿಷಯವನ್ನು ಮಲಯಕೇತುವಿನ ಮುಖಚರ್ಯೆಯಿಂದಲೇ ಅರಿತುಕೊಂಡು ಆಗ್ಗ ತಾನು ಸುಮ್ಮನಿದ್ದರೆ ತಂತ್ರವೆಲ್ಲ ಬರಿದಾಗುವುದೆಂದು ಬಗೆದು ಬಹು ಜಾಣ್ಮೆಯಿಂದ ಆ ಭಾವವನ್ನೇ ಬೇರೊಂದು ಬಗೆಯಾಗಿಸಲು, "ಅಮಾತ್ಯ ಇಂಥ ಆಭರಣವಿಶೇಷವನ್ನು, ಅದರಲ್ಲಿಯೂ ಕುಮಾರನು ತನ್ನ ದೇಹ ದಿಂದ ತೆಗೆದು ಬಹುಮತಿಸಿದ್ದನ್ನು ಇಂಥವನಿಗೇ ಕೊಡತಕ್ಕದು!" ಎಂದು ಚುಚ್ಚು ನುಡಿಯಾಡಿದನು. ಅದು ಪ್ರಶ್ನೆಯನ್ನು ಮುಂದುವರಿಸಲು ಮಲಯಕೇತುವಿಗೆ ಅನುವು ಕೊಟ್ಟಿತು. "ಹೇಳಬೇಕಾದ್ದನ್ನು ಸಿದ್ಧಾರ್ಥಕನಿಂದ ಕೇಳಬೇಕೆಂದು ಆರ್ಯನು ಬರೆದಿದ್ದಾನಷ್ಟೆ" ಎಂದನು. ಅಮಾತ್ಯನಿಗೆ ಅದೊಂದು ಬಗೆಯ ಮುನಿಸು ಬಂದಿತು. "ಹೇಳ ಬೇಕಾದ್ದೇನು, ಪತ್ರವಾರಿಗೆ? ಮೊದಲು ಇವನೇ ನನ್ನವನಲ್ಲವಾಗಿ ದ್ದಾನೆ!" ಎಂದು ಮೂದಲಿಸಿದನು. "ಹಾಗಾದರೆ ಈ ಮುದ್ರೆ ಯಾರದು?" ಎಂದು ಮಲಯಕೇತು ಕೇಳಲು, "ಕುಮಾರ, ಧೂರ್ತರು ಕಪಟಮುದ್ರೆಗಳನ್ನು ನಿರ್ಮಿಸಲು ಶಕ್ತರೇ ಆಗಿರುತ್ತಾರೆ" ಎಂದು ಉತ್ತರಕೊಟ್ಟನು. ಆಗ ಭಾಗುರಾಯಣನು "ಕುಮಾರ, ಅಮಾತ್ಯನು

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಸರಿಯಾಗಿ ಹೇಳಿದನು” ಎಂದು ಅವನನ್ನು ಸಮಾಧಾನಗೊಳಿಸಿ, “ಅಯ್ಯಾ ಸಿದ್ಧಾರ್ಥಕ, ಈ ಲೇಖವನ್ನು ಬರೆದವನಾರು?” ಎಂದು ಸಿದ್ಧಾರ್ಥಕನನ್ನು ಪ್ರಶ್ನಿಸಿದನು. ಸಿದ್ಧಾರ್ಥಕನು ಆ ಪತ್ರವನ್ನು ಬರೆದವನು ಶಕಟದಾಸನೆಂದು ಹೇಳಿದನು. ಶಕಟದಾಸನ ಹೆಸರನ್ನು ಕೇಳಿದೊಡನೆಯೆ ಅಮಾತ್ಯನು “ಶಕಟದಾಸನು ಬರೆದುದಾದರೆ ನಾನು ಬರೆದಂತೆಯೆ” ಎಂದನು. ಮಲಯಕೇತು ಕೂಡಲೆ ಶಕಟದಾಸನನ್ನು ಬರಮಾಡತಕ್ಕದ್ದೆಂದು ಅಪ್ಪಣೆಮಾಡಿದನು.

ಮಲಯಕೇತುವಿನ ಅಪ್ಪಣೆಯಂತೆ ಶಕಟದಾಸನನ್ನು ಬರಮಾಡಿದರೆ ಗುಟ್ಟು ಬಯಲಾಗಿ ಚಾಣಕ್ಯನ ತಂತ್ರವೆಲ್ಲವೂ ಭಗ್ನವಾಗುತ್ತಿದ್ದಿತು. ಇದು ಭಾಗುರಾಯಣನಿಗೆ ಚೆನ್ನಾಗಿ ತಿಳಿದಿದ್ದುದರಿಂದ ಅವನು ಉಪಾಯವಾಗಿ, “ಕುಮಾರ, ಶಕಟದಾಸನು ಅಮಾತ್ಯನೆದುರಿನಲ್ಲಿ ದಿಟವನ್ನೆಂದಿಗೂ ನುಡಿಯಲಾರ. ಅವನ ಕೈಬರಹವನ್ನು ತರಿಸಿ ತಾಳೆ ನೋಡಿದರೆ ಸಾಕು” ಎಂದನು. ಅಂತೆಯೇ ಮಾಡಿದುದೂ ಆಯಿತು. ಎರಡು ಬರವಣಿಗೆಗಳೂ ತಾಳೆಯೂ ಆಯಿತು. ರಾಕ್ಷಸನು ಗತ್ಯಂತರವಿಲ್ಲದೆ ಆ ಸಂದಿಗ್ಧ ಸಮಯದಲ್ಲಿ ಏನು ಮಾಡಲೂ ತೋರದಾಗಿ ವ್ಯಸನಕ್ಕೀಡಾದನು. ಅದೇ ಸಮಯದಲ್ಲಿಯೇ ಮಲಯಕೇತುವೂ, “ಪತ್ರದೊಡನೆ ಬಂದು ತಲಪಿದ ಆಭರಣಗಳಲ್ಲಿ ಇದೂ ಒಂದೇ?” ಎಂದು ಅವನ ಕೊರಳಿನಲ್ಲಿದ್ದ ಆಭರಣವನ್ನು ತೋರಿಸಿ ಪ್ರಶ್ನಿಸಿದನು. ರಾಕ್ಷಸನು ಸಹಜವಾಗಿಯೇ ಇದ್ದ ಸಂಗತಿಯನ್ನು ಇದ್ದಂತೆ “ಇವುಗಳನ್ನು ವರ್ತಕರಿಂದ ಕೊಂಡದ್ದು” ಎಂದು ಉತ್ತರ ಕೊಟ್ಟನು. ಮಲಯಕೇತು ಪ್ರತೀಹಾರಿಯನ್ನುದ್ದೇಶಿಸಿ “ವಿಜಯೆ, ಈ ಆಭರಣವನ್ನು ಗುರುತಿಸಬಲ್ಲೆಯಾ?” ಎಂದು ಕೇಳಿದನು. ವಿಜಯೆ, “ಕುಮಾರ, ಹೇಗೆ ತಾನೆ ಗುರುತಿಸದೆ ಇದ್ದೇನು? ಇದನ್ನು ಪ್ರಭು ಪರ್ವತೇಶ್ವರನು ಧರಿಸಿದ್ದನಲ್ಲವೆ?” ಎಂದಳು. ರಾಕ್ಷಸನು ಆ ಮಾತನ್ನು ಕೇಳಿದೊಡನೆಯೆ ಚಾಣಕ್ಯ ಹತಕನು ಪ್ರಯೋಗಿಸಿದ ತಂತ್ರಗಳಲ್ಲಿ ಇದೊಂದೆಂದು ಅರಿತನು. ಕುಮಾರನನ್ನುದ್ದೇಶಿಸಿ, “ಕುಮಾರ, ಈ ಆಭರಣಗಳನ್ನು ಚಾಣಕ್ಯನೇ ವರ್ತಕರ ಮೂಲಕ ನನಗೆ ಮಾರಿಸಿರಬೇಕು,” ಎಂದನು. ಮಲಯಕೇತು

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಆ ಮಾತನ್ನು ಒಪ್ಪಲಿಲ್ಲ. ರಾಕ್ಷಸನು ದೊಡ್ಡ ಇಕ್ಕಟ್ಟಿಗೆ ಸಿಕ್ಕಿದನು. "ಲೇಖನವು ನನ್ನದಲ್ಲವೆನ್ನೋಣವೆ? ಮುದ್ರೆಯೋ ನನ್ನದಾಗಿರುವುದು. ಬರೆದವನು ಆಪ್ತಮಿತ್ರನಾದ ಶಕಟದಾಸ. ಇನ್ನು ಉಳಿದುವೆಲ್ಲ ಇವು ಗಳಿಗೆ ತಕ್ಕಂತೆ ಒಂದಕ್ಕೊಂದು ಇಂಬುಗೊಡುತ್ತಿರುವುದು. ಅಂತು ಕುಟಿಲ ತಂತ್ರ ಸಫಲವಾಯಿತು. ಇನ್ನು ಈ ಕುಮಾರನನ್ನು ನಂಬಿಸ ಲಾಗುವುದಿಲ್ಲ," ಎಂದು ಮೊದಲಾಗಿ ಅವನು ಚಿಂತಿಸತೊಡಗಿದನು. ಅದೇ ಸಮಯದಲ್ಲಿಯೇ ಮಲಯಕೇತು "ಆರ್ಯನನ್ನು ಈ ಒಂದು ವಿಷಯದಲ್ಲಿ ಪ್ರಶ್ನಿಸುತ್ತೇನೆ," ಎಂದು ಹೇಳತೊಡಗಿದನು. ರಾಕ್ಷಸನಿಗೆ ಆಗಿನ ಆರ್ಯ ಶಬ್ದ ಸಹಿಸಲಾಗಲಿಲ್ಲ. "ಯಾರು ಆರ್ಯನೋ ಅವ ನನ್ನು ಕೇಳು" ಎಂದು ಮಾತ್ರ ಹೇಳಿ ಸುಮ್ಮನಾದನು. ಮಲಯಕೇತು ಮುಂದುವರಿಸಿದನು: "ಮೌರ್ಯನು ನಿನ್ನ ಸ್ವಾಮಿ ಪುತ್ರ. ನಿನ್ನನ್ನು ಓಲಗಿಸುತ್ತಿರುವ ನಾನು ಶತ್ರುವಾದ ಪರ್ವತೇಶ್ವರನ ಮಗ. ಅವನು ನಿನಗೆ ಹಣವನ್ನು ಕೊಡುವವನು. ನಾನು ನಿನ್ನ ಆಜ್ಞೆಗೆ ಒಳಪಟ್ಟು ನಿನ್ನಿಂದ ಅರ್ಥವನ್ನು ಪಡೆದುಕೊಳ್ಳುತ್ತಿದ್ದೇನೆ. ನಿನಗೆ ಅಲ್ಲಿ ಇರುವ ಮಂತ್ರಿ ಪದವಿ ಸತ್ಕಾರಪೂರ್ವಕವಾದ ದಾಸ್ಯ. ಇಲ್ಲಿ ನೀನು ಸ್ವತಂತ್ರ. ಅಧಿಕವಾದ ಯಾವ ಸ್ವಾರ್ಥದ ಅಪೇಕ್ಷೆ, ಓ ರಾಕ್ಷಸ, ನಿನ್ನನ್ನು ಅನಾರ್ಯನನ್ನಾಗಿಸುತ್ತಿದೆ?"

ರಾಕ್ಷಸನು ಈ ಮಾತುಗಳನ್ನೆಲ್ಲ ಕೇಳಿ ಬಹುವಾಗಿ ಕುಗ್ಗಿ ಹೋದನು. ವಿಧಿ ತನಗೆ ವಿಮುಖವಾದುದಕ್ಕೆ ಅವನ ವ್ಯಸನ ಅಷ್ಟಿ ಷ್ಟಲ್ಲ. ಇದರಮೇಲಾಗಿ ಹುಣ್ಣಿನಮೇಲೆ ಬೊಬ್ಬೆಯೆದ್ದಂತೆ ವಿಷಕನ್ಯಾ ಪ್ರಯೋಗದ ಅಪರಾಧವೂ ತನ್ನ ಕೊರಳಿಗೇ ಕಟ್ಟಲು ಅವನು ಮತ್ತೂ ದೀನನಾಗಿ ಹೋದನು. ಮಲಯಕೇತು ಸಾಮಂತನರೇಶ್ವರರಾದ ಚಿತ್ರವರ್ಮಾದಿಗಳನ್ನು ಕೊಲ್ಲುವಂತಾಜ್ಞಾಪಿಸಿದನು. ರಾಕ್ಷಸನನ್ನು ಕುರಿತು, "ರಾಕ್ಷಸಾ! ನೀನು ರಾಕ್ಷಸನಾದರೆ ನಾನು ರಾಕ್ಷಸನಾದೇನೆ? ನಾನು ವಿಶ್ವಾಸಘಾತುಕನೂ ಅಲ್ಲ. ನಾನು ಮಲಯಕೇತು. ಹೋಗು. ಚಂದ್ರಗುಪ್ತನನ್ನೇ ಓಲಯಿಸು. ಹೊರಡು" ಎಂದು ಹೇಳಿ ಭಾಗು ರಾಯಣನೊಡನೆ ತೆರಳಿದನು.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಇತ್ತ ಮಲಯಕೇತು ಚಿತ್ರವರ್ಮಾದಿ ಸಾಮಂತ ನರೇಶ್ವರರನ್ನು ನಿಷ್ಕಾರಣವಾಗಿ ವಧೆಗೀಡುಮಾಡಿದ ಸುದ್ದಿಯನ್ನು ಕೇಳಿ ಇತರ ಸಾಮಂತರೆಲ್ಲರೂ ತಮ್ಮ ಗತಿಯೂ ಅಂತೆಯೇ ಆದೀತೆಂದು ಹೆದರಿ ತಮ್ಮ ತಮ್ಮ ನಾಡುಗಳಿಗೆ ಹಿಂತಿರುಗಿದರು. ಅವರು ಅತ್ತ ಹೋಗುತ್ತಲೆ ಇತ್ತ ನಿಸ್ಸಹಾಯನಾದ ಮಲಯಕೇತುವನ್ನು ಚಾಣಕ್ಯನ ಕಡೆಯ ಭಾಗುರಾಯಣಾದಿಗಳೇ ಹಿಡಿದು ಬಂಧಿಸಿದರು. ಆಗ ಮಲಯಕೇತುವಿಗೆ ಎಲ್ಲವಿಷಯಗಳೂ ಮನದಟ್ಟಾದವು. ನೀರು ಹೋದಮೇಲೆ ಅಣೆಕಟ್ಟಿದಂತೆ ಅವನು ಪಟ್ಟ ಮರುಕವೆಲ್ಲವೂ ವ್ಯರ್ಥವಾಯಿತು.

ಇತ್ತ ಅಮಾತ್ಯರಾಕ್ಷಸನಾದರೋ ತಾನು ಚಾಣಕ್ಯನ ಕಡೆಯವರನ್ನೇ ತನ್ನ ಕಡೆಯವರೆಂದು ನಂಬಿ ಕೆಟ್ಟುದಕ್ಕಾಗಿ ಪರಿತಪಿಸಿಹೋದನು. ಚಾಣಕ್ಯನ ಕಪಟೋಪಾಯಗಳನ್ನು ಮೀರಿದ ವಿಧಿವಿಲಾಸ ಅವನನ್ನು ವ್ಯಸನಾರ್ಣವದಲ್ಲಿಯೇ ಮುಳುಗಿಸಿತು. ಯಾವುದಕ್ಕಾಗಿ ಯಾರಿಗಾಗಿ ಹೆಣಗಿದನೋ ಅದೆಲ್ಲವೂ ಬೂದಿಯಲ್ಲಿ ಮಾಡಿದ ಹೋಮವಾಗಿ ಪರಿಣಮಿಸಿತು. ಮುಂದೆ ಗತಿಯೇನೆಂಬುದೇ ಅವನಿಗೆ ಆ ಸಮಯದಲ್ಲಿ ತೋಚದೆ ಹೋಯಿತು. ವಿರಕ್ತಿಯನ್ನಾದರೂ ನೆಮ್ಮಿ ತಪೋವನವನ್ನು ಪ್ರವೇಶಿಸಬೇಕೆಂದರೆ ಅವನನ್ನು ಸುಮ್ಮನೆ ಸುಡುತ್ತಿದ್ದ ಸೇಡಿನ ಕಿಚ್ಚು ಎಡೆಗೊಡಲಿಲ್ಲ. ಶತ್ರು ಜೀವಿಸಿರುವವರೆಗೂ ಅಂತಹ ಧೀರನು ಆತ್ಮಹತ್ಯೆಯ ಹಂತವನ್ನು ಮುಟ್ಟಬಲ್ಲನೆ! ಅದೂ ಅವನಿಂದಾಗಲಿಲ್ಲ. ಎಲ್ಲಕ್ಕೂ ಮೇಲಾಗಿ ತನ್ನ ಕಳತ್ರ ಪುತ್ರರನ್ನು ರಕ್ಷಿಸಿ ಉಪಕರಿಸಿದ ಚಂದನದಾಸನನ್ನು ಬಂಧನದಿಂದ ಪಾರುಮಾಡುವ ಕಾರ್ಯವೊಂದು ಅವನನ್ನು ಬಹುವಾಗಿ ತ್ವರೆಗೊಳಿಸುತ್ತಿದ್ದಿತು. ಇದಕ್ಕಾಗಿ ಅವನು ಶಸ್ತ್ರವನ್ನು ಬಿಸಾಡಬಯಸದೆ ಸಶಸ್ತ್ರನಾಗಿಯೇ ಕುಸುಮಪುರಕ್ಕೆ ನಡೆದನು.

ಮಲಯಕೇತುವಿನಿಂದ ತಿರಸ್ಕೃತನಾದ ಅಮಾತ್ಯರಾಕ್ಷಸನು ಚಂದನದಾಸನನ್ನು ಬಿಡಿಸುವುದಕ್ಕಾದರೂ ಕುಸುಮಪುರಕ್ಕೆ ಬಂದೇಬರುವನೆಂದು ಚಾಣಕ್ಯನಿಗೆ ಮೊದಲೇ ತಿಳಿದಿದ್ದಿತು. ಅದಕ್ಕಾಗಿ ಅವನು ಏನುಮಾಡಬೇಕೆಂಬುದನ್ನು ಯೋಚಿಸಿ ಎಲ್ಲವನ್ನೂ ಸಿದ್ಧಪಡಿಸಿದ್ದನು. ರಾಕ್ಷಸನು ಕುಸುಮಪುರದ ಹೊರಚ್ಚಿನಲ್ಲಿ ಕಾಣಿಸಿಕೊಂಡೊಡನೆ ಅಲ್ಲೊಬ್ಬ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಚಾಣಕ್ಯಸೇವಕನು ಸಿದ್ಧನಾಗಿದ್ದನು. ಕೊರಳಿಗೆ ಹಗ್ಗವನ್ನು ಬಿಗಿಸಿಕೊಂಡು ಅವನು ಸಾಯುವವನಂತೆ ಗುರುಗುರುಧ್ವನಿಯನ್ನು ಹೊರಡಿಸತೊಡಗಿದನು. ರಾಕ್ಷಸನ ದೃಷ್ಟಿ ಅತ್ತ ಸರಿಯಿತು. ಅವನಿಗದು ಬಹು ಭಯಂಕರವಾಗಿ ತೋರಿತು. ಅನ್ಯಾಯವಾಗಿ ಒಬ್ಬ ಜೀವಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಘೋರ ಅವನಲ್ಲಿ ಮರುಕವನ್ನೆಬ್ಬಿಸಿತು. ಕೂಡಲೆ ಅವನ ಬಳಿಸಾರಿ, "ಭದ್ರ, ಹೀಗೇಕೆ ಉರುಲುಹಾಕಿಕೊಂಡು ಸಾಯುವೆ?" ಎಂದು ಪ್ರಶ್ನಿಸಿದನು. ಅವನು, "ಆರ್ಯ, ನನ್ನ ಮಿತ್ರನ ವಿನಾಶವಾಗಿ ನಾನು ದುಃಖಕ್ಕೆ ಈಡಾಗುವ ಮೊದಲೇ ಪಾರಾಗಬೇಕೆಂದು ಹೀಗೆ ಮಾಡುತ್ತಿದ್ದೇನೆ" ಎಂದನು. ರಾಕ್ಷಸನು ಅದನ್ನು ಕೇಳಿ, ಅವನ ಪರಿತಾಪದ ಸ್ಥಿತಿಯನ್ನು ಕಂಡು ತನ್ನಂತೆಯೇ ಅವನೂ ಒಬ್ಬ ದುಃಖಿಯಾಗಿರಬೇಕೆಂದು ಊಹಿಸಿದನು. ಮಿತ್ರನ ಸಾವಿಗಿಂತ ಮೊದಲೆ ಸಾಯಲು ಸಿದ್ಧನಾಗಿದ್ದ ಅವನ ವಿಚಾರವನ್ನು ಸಂಪೂರ್ಣವಾಗಿ ತಿಳಿಯಬಯಸಿ, "ಅಯ್ಯಾ, ರಹಸ್ಯವಲ್ಲದಿದ್ದರೆ ಆ ಮಿತ್ರವ್ಯಸನವೆಂತಹುದೆಂದು ಕೇಳಬಯಸುತ್ತೇನೆ" ಎಂದನು. ಆ ಕಪಟಿ ಹೇಳತೊಡಗಿದನು :—

"ಕುಸುಮಪುರದಲ್ಲಿ ವಿಷ್ಣುದಾಸಶೆಟ್ಟಿ ನನಗೆ ಗೆಳೆಯ. ಅವನಿಗೆ ಚಂದನದಾಸ ಗೆಳೆಯ. ಚಂದ್ರಗುಪ್ತನು ಚಂದನದಾಸನನ್ನು ನಿರ್ದಯನಾಗಿ ಶೂಲಕ್ಕೇರಿಸಬೇಕೆಂದು ಅಪ್ಪಣೆಮಾಡಿದುದನ್ನು ಕೇಳಿ ವಿಷ್ಣುದಾಸನು ಅವನಲ್ಲಿ ಹೋಗಿ ತನ್ನ ಸಂಪತ್ತೆಲ್ಲವನ್ನೂ ಕಾಣಿಕೆಯಾಗಿ ಪಡೆದು ಚಂದನದಾಸನನ್ನು ಬಿಡುಗಡೆಮಾಡಬೇಕೆಂದು ಬೇಡಿದನು. ಚಂದ್ರಗುಪ್ತನು ಅರ್ಥಾಪೇಕ್ಷೆಯಿಂದ ಅವನನ್ನು ಆ ಶಿಕ್ಷೆಗೆ ಗುರಿಮಾಡಲಿಲ್ಲವೆಂದೂ, ರಾಕ್ಷಸನ ಮನೆಯವರನ್ನು ಗುಟ್ಟಾಗಿ ಕಾಪಾಡುತ್ತಿರುವುದಕ್ಕಾಗಿ ಆರೀತಿ ದಂಡಿಸಲಾಗಿದೆಯೆಂದೂ ಈಗಲಾದರೂ ಅವನು ಅವರನ್ನು ಒಪ್ಪಿಸಿದರೆ ಬಿಡುಗಡೆಯಾದೀತೆಂದೂ ಹೇಳಿದನು. ಅದರಿಂದ ವಿಷ್ಣುದಾಸನು ಮಿತ್ರವ್ಯಸನಕ್ಕೆ ಮುಂಚೆಯೇ ಅಗ್ನಿಪ್ರವೇಶಮಾಡಲು ಸಂಕಲ್ಪಿಸಿ ನಗರವನ್ನು ಬಿಟ್ಟು ಹೊರಟುಹೋದನು. ನಾನೂ ವಿಷ್ಣುದಾಸನ ವಿಷಯದಲ್ಲಿ ಕೇಳಬಾರದ್ದನ್ನು ಕೇಳುವ ಮೊದಲೇ ನನ್ನನ್ನು ಮುಗಿಸಿಕೊಳ್ಳಬೇಕೆಂದು ಈ ಜೀರ್ಣೋದ್ಯಾನಕ್ಕೆ ಬಂದೆ."

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಅಮಾತ್ಯರಾಕ್ಷಸನು ಕಥೆಯನ್ನೆಲ್ಲ ಕೇಳಿ, "ಭದ್ರ, ಚಂದನದಾಸನನ್ನು ಇನ್ನೂ ಕೊಲ್ಲಲಿಲ್ಲವಷ್ಟೆ" ಎಂದು ಕೇಳಿದನು. ಅದಕ್ಕವನು "ಇನ್ನೇನು, ಈಗಲೊ ಆಗಲೊ ಕೊಲ್ಲುತ್ತಾರೆ. ಈಗಲೂ ಅಧಿಕಾರಿಗಳು ರಾಕ್ಷಸನ ಮನೆಯವರನ್ನು ಒಪ್ಪಿಸಿ ಬದುಕಿಕೊಳ್ಳೆಂದು ಅವನಿಗೆ ಅನೇಕ ಬಾರಿ ಹೇಳುತ್ತಿದ್ದರೂ ಅವನು ಗೆಳೆಯನಲ್ಲಿಯ ವಾತ್ಸಲ್ಯದಿಂದ ಒಪ್ಪಿಸಲಿಲ್ಲ. ಆದುದರಿಂದ ನಾನಿನ್ನು ಸಾಯಲು ಕಾಲಹರಣಮಾಡುವುದಿಲ್ಲ" ಎಂದನು. ರಾಕ್ಷಸನಿಗೆ ಅಮಿತಾನಂದವಾಯಿತು. ಅವನು, "ಭಲೆ, ಮಿತ್ರ ಚಂದನದಾಸ! ಶರಣಾಗತನ ಸಮಕ್ಷದಲ್ಲಿಯೆ ಶರಣ್ಯನಾದ ಶಿಬಿ ಚಕ್ರವರ್ತಿ ಅಸುದೊರೆದು ಕೀರ್ತಿಯನ್ನು ಗಳಿಸಿದನು. ಶರಣ್ಯನಾದ ನೀನು ಶರಣಾಗತನಾದ ನಾನಿಲ್ಲದೆಯೇ ಈಗ ಆ ಕೀರ್ತಿಯನ್ನು ಸಂಪಾದಿಸಿಕೊಳ್ಳುತ್ತಿರುವೆಯಲ್ಲ!" ಎಂದು ಚಂದನದಾಸನನ್ನು ಹೊಗಳಿದನು. ಉತ್ಸಾಹವನ್ನು ತುಂಬಿಕೊಂಡು ಆ ಪುರುಷನನ್ನು ಕುರಿತು, "ಭದ್ರ, ಹೋಗು, ಈಗಲೆ ಜಾಗ್ರತೆಯಾಗಿ ಹೊರಟು ವಿಷ್ಣುದಾಸನನ್ನು ತಡೆ, ಅವನು ಅಗ್ನಿಪ್ರವೇಶಮಾಡದಿರಲಿ, ಚಂದನದಾಸನ ಮರಣವನ್ನು ನಾನು ತಪ್ಪಿಸುತ್ತೇನೆ" ಎಂದು ಹೇಳಿದನು. ಆ ಚಾಣಕ್ಯಚಾರನಾದರೊ ಅಲ್ಲಿಗೇ ಬಿಡದೆ, "ಅಯ್ಯಾ, ಯಾವ ಉಪಾಯದಿಂದ ಚಂದನದಾಸನನ್ನು ಬಿಡಿಸುವೆ?" ಎಂದು ಪ್ರಶ್ನಿಸಿದನು. "ಇದೊ ಇದೊ ಈ ಖಡ್ಗದಿಂದ" ಎಂದು ರಾಕ್ಷಸನು ಉತ್ತರವೀಯಲು ಅವನು, "ಹಾಗಿದ್ದರೆ ತಾವು ಅಮಾತ್ಯರಾಕ್ಷಸರೆ?" ಎಂದು ಮತ್ತೊಮ್ಮೆ ಕೇಳಿದನು. ರಾಕ್ಷಸನು, "ಭದ್ರ, ಕಾಲಹರಣ ಬೇಡ, ವಿಷ್ಣುದಾಸನಿಗೆ ಹೇಳು, ರಾಕ್ಷಸನೇ ಚಂದನದಾಸನನ್ನು ಮರಣದಿಂದ ಬಿಡಿಸುವನೆಂದು" ಎಂದು ಭರವಸೆ ನುಡಿದು, ಒರೆಯಿಂದ ಖಡ್ಗವನ್ನು ಹಿರಿದು ಝಳಪಿಸುತ್ತಾ ಹೊರಡ ತೊಡಗಿದನು. ಚಾರನಾದರೊ, "ಆರ್ಯ, ದಮ್ಮಯ್ಯ, ಖಡ್ಗವನ್ನು ಹಿಡಿದು ಹೋದರೆ ಕೂಡಲೆ ಚಂದನದಾಸನನ್ನು ಕೊಲ್ಲುತ್ತಾರೆ. ಹಿಂದೆ ಆ ಚಾಣಕ್ಯಹತಕನು ಶಕಟದಾಸನನ್ನು ಶೂಲಕ್ಕೇರಿಸಬೇಕೆಂದು ಆಜ್ಞೆ ಮಾಡಿದಾಗ ಯಾರೋ ಅವನನ್ನು ಬಿಡಿಸಿಕೊಂಡು ಹೋದರಂತೆ. ಅಂದಿನಿಂದ ಶೂಲಕ್ಕೆ ಯಾರನ್ನಾದರೂ ಏರಿಸುತ್ತಿರುವಾಗ ಖಡ್ಗಧಾರಿಯಾದವ

CC-0. Bhagavad Ramanuja National Research Institute, Melukote Collection.